ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 41 | ಅಕ್ಟೋಬರ್ 12, 1980 | ಬೆಲೆ : 50 ಪೈಸೆ

ವ್ಯಾಪಕ ಚಳುವಳಿ

ಮಲಪ್ರಭಾ ರೈತರ ಚಳುವಳಿ ಪ್ರಾರಂಭವಾದಂದಿನಿಂದ ಕರ್ನಾಟಕ ರಾಜ್ಯದಾದ್ಯಂತ ರೈತರು ಎಚ್ಚೆತ್ತು, ರಾಜ್ಯವ್ಯಾಪಿ ಚಳುವಳಿ ಬೆಳೆಯುವುದು ಕಂಡುಬರುತ್ತಿದೆ, ಮಲಪ್ರಭಾ ಚಳುವಳಿಯೊಂದಿಗೆ, ಘಟಪ್ರಭಾ ನೀರಾವರಿ ಪ್ರದೇಶದ ರೈತರು ಚಳುವಳಿಯ ದಾರಿಯನ್ನು ಹಿಡಿದಿದ್ದಾರೆ. ಚಳುವಳಿಯು ಉಗ್ರರೂಪವನ್ನು ತಾಳುವಂತಿದೆ. ರಾಯಚೂರು ಜಿಲ್ಲೆಯ ತುಂಗಭದ್ರಾ ನೀರಾವರಿ ಪ್ರದೇಶದ ರೈತರು ಇದೇ 12 ರಂದು ಸೇರಿ ವ್ಯಾಪಕ ಹೋರಾಟ ಕಾರ್ಯಕ್ರಮ ಹಾಕುವುದರಲ್ಲಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಐದು ದಿನಗಳಿಂದ ತೀವ್ರಗೊಂಡಿರುವ ಚಳುವಳಿಯು, ಜಿಲ್ಲೆಯ ಜನಜೀವನವನ್ನೇ ಅಲುಗಾಡಿಸಿದೆ,

ಬರಗಾಲ ಪೀಡಿತ ಪ್ರದೇಶದ ರೈತರು, ಅದರಲ್ಲೂ ಕೋಲಾರ ಜಿಲ್ಲಾ ರೈತರು ವಿರೋಧ ಪಕ್ಷಗಳ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಹೋರಾಡಲು ಈಗಾಗಲೇ ಯೋಜನೆ ಹಾಕಿದ್ದಾರೆ. ದ. ಕ. ಜಿಲ್ಲೆಯಲ್ಲಿ ರೈತ-ಕೃಷಿಕೂಲಿಗಾರರ ಹೋರಾಟ ಇದೀಗ ಪ್ರಾರಂಭವಾಗಿದೆ. ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲೂ ಮತ್ತು ರಾಜ್ಯದ ಬೇರೆಬೇರೆಡೆಗಳಲ್ಲೂ ಇದೀಗ ರೈತಚಳುವಳಿಯು ಬೆಳೆಯುವುದು ಕಾಣುತ್ತಿದೆ.

ಸಂಪಾದಕೀಯ

ಎಲ್ಲೆಡೆಗಳಲ್ಲೂ ಕಂಡುಬಂದಿರುವ ಬೇಡಿಕೆಗಳಲ್ಲಿ ರೈತರ ಬೆಳೆಗೆ ಸರಿಯಾದ ಬೆಲೆ, ರೈತರುಕೊಳ್ಳುವ ವಸ್ತುಗಳ ಬೆಲೆಯನ್ನು ಇಳಿಸಬೇಕೆನ್ನುವ, ರೈತರ ಎಲ್ಲಾ ಸಾಲಗಳನ್ನು ರದ್ದುಗೊಳಿಸಬೇಕು, ನೀರಾವರಿ ಪ್ರದೇಶಗಳಲ್ಲಿ ಬೆಟರ್‌ಮೆಂಟ್ ಲೆವಿ ಮತ್ತು ನೀರಿನ ತೆರಿಗೆ ಇತ್ಯಾದಿಗಳನ್ನು ಇಳಿಸಬೇಕು-ಎಂಬಿತ್ಯಾದಿ ಬೇಡಿಕೆಗಳು ಸರ್ವೇಸಾಮಾನ್ಯವಾಗಿವೆ.

ಸ್ವಾತಂತ್ರ್ಯ ದೊರೆತಂದಿನಿಂದ ನಮ್ಮನ್ನು ಆಳಿಕೊಂಡು ಬಂದ ಸರಕಾರಗಳು ರೈತರ, ಕಾರ್ಮಿಕರ ಮತ್ತು ಜನಸಾಮಾನ್ಯರನ್ನು ಕೊಳ್ಳೆಹೊಡೆದು ಗುತ್ತೇದಾರಿ ಬಂಡವಾಳಗಾರರನ್ನು ಪೋಷಿಸುತ್ತಾ ಬಂದಿರುವ ದಿವಾಳಿಖೋರ ಬಂಡವಾಳಶಾಹಿ ಪಥದಿಂದಲಾಗಿ ಗ್ರಾಮಾಂತರ ಪ್ರದೇಶದಲ್ಲಿ ಹಳ್ಳಿಯ ಅತ್ಯಂತ ಗರೀಬರೂ ಸೇರಿದಂತೆ ಎಲ್ಲರೂ ಶೋಷಣೆಗೊಳಗಾಗಿದ್ದಾರೆ. ಕಾರಖಾನೆಗಳಲ್ಲಿ ತಯಾರಾದ ಸರಕುಗಳ ಬೆಲೆ ಎಷ್ಟೆಷ್ಟೋಪಟ್ಟು ಏರಿರುವುದಾದರೂ, ರೈತನ ಬೆಳೆಯ ಬೆಲೆ ಏರಿರುವುದು ಅತ್ಯಂತ ಸಣ್ಣ ಪ್ರಮಾಣದಲ್ಲಿ. ಸಾಮಾನ್ಯ ರೈತರೆಲ್ಲರೂ ದಿವಾಳಿಯಾಗುತ್ತಲಿರುವ ಇಂದಿನ ಪರಿಸ್ಥಿತಿಯಲ್ಲಿ, ಅತೃಪ್ತಿ ಮತ್ತು ಸಿಟ್ಟಿಗೆದ್ದ ರೈತರು ಹೋರಾಟದ ದಾರಿಯನ್ನು ಹಿಡಿದಿರುವರು. ವ್ಯಾಪಕ ಹೋರಾಟವಾದಿ, ಸರಕಾರವನ್ನೇ ಬುಡಮೇಲು ಮಾಡುವ ಅಗಾಧ ಶಕ್ತಿಯೂ ಈ ಚಳುವಳಿಯಲ್ಲಡಗಿದೆ.

[ಕಡೆಯ ಪುಟ ನೋಡಿ]

ಉದ್ಯೋಗ ವಿನಿಮಯ ಕಛೇರಿಗಳೆದುರು

ಯುವ ಜನತೆಯ ಪ್ರತಿಭಟನೆ

ಉದ್ಯೋಗ ವಿನಿಮಯ ಕಛೇರಿಗಳಲ್ಲಿ ನಡೆಯುವ ಮೋಸ ಮತ್ತು ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತ ನಿಲ್ಲಲಿ; ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಸೀನಿಯಾರಿಟಿ ಪಟ್ಟಿಯನ್ನು ಅದಲು ಬದಲು ಮಾಡುವುದು ನಿಲ್ಲಲಿ; ದುಡಿಯಲು ಸಾಧ್ಯವಿರುವ ಎಲ್ಲರಿಗೂ ಉದ್ಯೋಗವನ್ನು ಸರಕಾರ ಒದಗಿಸಲಿ; ಉದ್ಯೋಗ ಕೊಡುವ ತನಕ ಕೇರಳ ಮತ್ತು ಪಶ್ಚಿಮ ಬಂಗಾಳ ಸರಕಾರಗಳಂತೆ ನಿರುದ್ಯೋಗ ಭತ್ಯೆ ಕೊಡಬೇಕು; ನಮ್ಮ ದೇಶದ ಸಂಪತ್ತನ್ನು ಹೊರದೇಶಗಳಿಗೆ ಕೊಂಡೊಯ್ಯುವುದಕ್ಕೆ ಬದಲು, ಇಲ್ಲೇ ಉದ್ಯಮಗಳನ್ನು ಸ್ಥಾಪಿಸಿ ಉದ್ಯೋಗ ದೊರಕುವಂತಾಗಲಿ; ಸ್ಟೈಫಂಡರಿ ಪದವೀಧರರ ವೇತನವನ್ನು ಹೆಚ್ಚಿಸಿ ಕೆಲಸ ಖಾಯಂಗೊಳಿಸಿರಿ - ಎಂಬಿತ್ಯಾದಿ ಘೋಷಣೆಗಳೊಂದಿಗೆ ತಾ.6-10-80 ರಂದು ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರವೂ ಸೇರಿದಂತೆ ಹಲವು ಕಡೆ ಉದ್ಯೋಗ ವಿನಿಮಯ ಕಛೇರಿಗಳೆದುರು ಯುವಜನರ ಪ್ರತಿಭಟನೆ, ಸತ್ಯಾಗ್ರಹ ನಡೆಯಿತು.

ಕರ್ನಾಟಕ ರಾಜ್ಯ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ.ವೈ.ಓ.)ಯ ಕರೆ ಮೇರೆಗೆ ಅಕ್ಟೋಬರ್ 6ರಂದು ಬೆಂಗಳೂರು, ಕೋಲಾರ, ಮಂಗಳೂರು, ಕುದುರೆಮುಖ, ಶೃಂಗೇರಿ, ಸಕಲೇಶಪುರ, ಶಿವಮೊಗ್ಗ, ಗುಲಬರ್ಗ, ಮತ್ತು ಇತರ ಹಲವೆಡೆಗಳಲ್ಲಿ ಕಾರ್ಯಕ್ರಮ ನಡೆದ ವರದಿಯಾಗಿದೆ.

ಬೆಂಗಳೂರಲ್ಲಿ ಸುಮಾರು 100 ಮಂದಿ ಯುವಜನರು ನಗರದ ಕೇಂದ್ರದಿಂದ ಮೆರವಣಿಗೆಯಲ್ಲಿ ಹೊರಟು ಉದ್ಯೋಗ ವಿನಿಮಯ ಕಛೇರಿ ಎದುರು ಸಂಜೆತನಕ ಸತ್ಯಾಗ್ರಹ ನಡೆಸಿ, ಮನವಿಯನ್ನಿತ್ತರು. ಅಲ್ಲೆ ನಡೆದ ಬಹಿರಂಗ ಸಭೆಯಲ್ಲಿ ಕಾಂ. ಜಿ. ವಿ. ಶ್ರೀರಾಮರೆಡ್ಡಿ ಮತ್ತು ಕಾಂ. ಶಾಂತರೇಣುಕಾರಾಧ್ಯ ಮಾತನಾಡಿದರು.

ಕೋಲಾರದಲ್ಲಿ ಸುಮಾರು 30 ಮಂದಿ ಧರಣಿ ಸತ್ಯಾಗ್ರಹ ನಡೆಸಿ; ಉದ್ಯೋಗ ವಿನಿಮಯ ಅಧಿಕಾರಿಗೆ ಮನವಿ ಸಲ್ಲಿಸಿದರು. ಕಾಂ. ಸಿ. ವಿ. ಮುನಿನಾರಾಯಣಸ್ವಾಮಿ ಇದರ ನೇತೃತ್ವ ವಹಿಸಿದ್ದರು.

ಶಿವಮೊಗ್ಗದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿಗಳಿಗೆ ಮನವಿ ಕೊಟ್ಟ ನಂತರ ಬೆಳಗ್ಗೆ 11ರಿಂದ ಸಂಜೆತನಕ ಧರಣಿ ಸತ್ಯಾಗ್ರಹ ನಡೆಯಿತು. ಧರಣಿಯಲ್ಲಿ ಕಾಂ. ಆರ್, ಗೋಪಾಲ್‌ನಾಯಕ್, ಕೆ. ಎಲ್. ಎನ್. ರಾವ್, ಮೇಘರಾಜ್, ಎನ್ನಾರ್ವಿ ನಾಯಕ್, ಗಣೇಶ, ಮಲ್ಲೇಶಪ್ಪ, ಮಾಲತೇಶ, ಈಶ್ವರ ನಾಯಕ್ ಮತ್ತು ಶಿವಾಜಿರಾವ್ ಭಾಗವಹಿಸಿದ್ದರು.

ಮಂಗಳೂರಲ್ಲಿ ಸುಮಾರು 100 ಜನ ಯುವಕ-ಯುವತಿಯರು ಬೆಳಗ್ಗೆ 11ರಿಂದ ಸಂಜೆ 5ರ ತನಕ ಉದ್ಯೋಗ

[ಕಡೆಯ ಪುಟ ನೋಡಿ]

ಆರು ಪಕ್ಷಗಳ ಯಶಸ್ವೀ ರಾಷ್ಟ್ರೀಯ ಸಮಾವೇಶ

ಲೋಕದಳ, ಕಾಂಗ್ರೆಸ್ (ಯು), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಸಿ.ಪಿ.ಐ., ಫಾರ್ವರ್ಡ್ ಬ್ಲಾಕ್ ಮತ್ತು ಆರ್. ಎಸ್. ಪಿ. ಗಳನ್ನೊಳಗೊಂಡ ಆರು ಪಕ್ಷಗಳ ಸಮನ್ವಯ ಸಮಿತಿ ಏರ್ಪಡಿಸಿದ್ದ ಎರಡು ದಿನಗಳ ರಾಷ್ಟ್ರೀಯ ಸಮಾವೇಶವು ಸೆಪ್ಟೆಂಬರ್ ೨೭ ಮತ್ತು ೨೮ರಂದು ನವದೆಹಲಿಯಲ್ಲಿ ಯಶಸ್ವಿಯಾಗಿ ನೆರವೇರಿತು. ಈ ಆರು ರಾಜಕೀಯ ಪಕ್ಷಗಳು ಮತ್ತು ಅವುಗಳ ರೈತ, ಕಾರ್ಮಿಕ, ವಿದ್ಯಾರ್ಥಿ, ಯುವ ಮತ್ತು ಮಹಿಳಾ ಸಾಮುದಾಯಿಕ ಸಂಘಟನೆಗಳಿಗೆ ಸೇರಿದ್ದ ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲುಗೊಂಡಿದ್ದರು.

ಸಮಾವೇಶದ ಅಧ್ಯಕ್ಷ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದವರು ಲೋಕದಳದ ರಬಿರಾಯ್, ಎಂ. ಫರೂಕಿ (ಸಿ.ಪಿ.ಐ.), ಇ. ಎಂ. ಎಸ್. ನಂಬೂದಿರಿಪಾಡ್ (ಸಿ.ಪಿ.ಐ. (ಎಂ), ನರಸಿಂಗಬೈಥಾ ಕಾಂಗ್ರೆಸ್ (ಯು), ಸುಶೀತಲ್ ಭಟ್ಟಾಚಾರ್ಯ (ಆರ್.ಎಸ್.ಪಿ.) ಮತ್ತು ಫಾರ್ವರ್ಡ್ ಬ್ಲಾಕಿನ ಅಮರ್ ಪ್ರಸಾದ್ ಚಕ್ರವರ್ತಿ. ಸಮನ್ವಯ ಸಮಿತಿ ಸಿದ್ಧಪಡಿಸಿದ್ದ "ಪ್ರಸಕ್ತ ಪರಿಸ್ಥಿತಿ ಮತ್ತು ಹೋರಾಟದ ಕರೆ" ಎಂಬ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ರಾಜಕೀಯ ಪಕ್ಷಗಳಿಗೂ ಅವುಗಳ ಸಾಮುದಾಯಿಕ ಸಂಘಟನೆಗಳಿಗೂ ಸೇರಿದ್ದ ಸುಮಾರು 62 ಮಂದಿ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಈ ನಿರ್ಣಯವನ್ನು ಸಮಾವೇಶವು ಸರ್ವಾನುಮತದಿಂದ ಅಂಗೀಕರಿಸಿದೆ,

ಐಕ್ಯಹೋರಾಟಗಳತ್ತ ಜನತೆಯ ಒಲವು :

ಸಮಾವೇಶದ ಕರಡು ನಿರ್ಣಯವನ್ನು ಮಂಡಿಸುತ್ತಾ ಲೋಕದಳದ ಶ್ರೀ ಮಧುಲಿಮಯೆ ಅವರು ಸಮಾವೇಶದ ಸಂಘಟಕರ ನಡುವೆ ಇವೆಯೆನ್ನಲಾದ ಭಿನ್ನಾಭಿಪ್ರಾಯಗಳನ್ನೇ ದೊಡ್ಡದು ಮಾಡಿ ಹೇಳುತ್ತಿರುವ ಆಳುವ ಪಕ್ಷವನ್ನೂ, ಸ್ಥಾಪಿತಹಿತಾಸಕ್ತಿಗಳನ್ನೂ ಟೀಕಿಸಿದರು. ಸಮಾವೇಶದ ಮುಂದಿರಿಸಲಾದ ಕರಡು ನಿರ್ಣಯ ಈ ಎಲ್ಲಾ ಪ್ರಚಾರವನ್ನೂ ಅಲ್ಲಗಳೆದಿದೆ. ಬೇಡಿಕೆಗಳ ವಿಷಯದಲ್ಲಿ ಮಾತ್ರವೇ ಅಲ್ಲದೆ ರಾಷ್ಟ್ರೀಯ ಪರಿಸ್ಥಿತಿಯ ಬೇರೆಬೇರೆ ಮುಖಗಳ ಕುರಿತೂ ಆರೂ ಪಕ್ಷಗಳಲ್ಲಿ ಬಹುತೇಕ ಏಕಾಭಿಪ್ರಾಯವಿರುವುದನ್ನೂ ಇದು ಸ್ಪಷ್ಟಪಡಿಸಿದೆ. ಸಮಾವೇಶದ ಸಂಘಟಕರಲ್ಲಿ ನೇತೃತ್ವದ ಕುರಿತು ಭಿನ್ನಾಭಿಪ್ರಾಯವಿದೆಯೆಂದು ಪತ್ರಿಕೆಗಳು ಬರೆದಿರುವುದು ಅರ್ಥಹೀನವೆಂದೂ ಶ್ರೀ ಲಿಮಯೆ ಹೇಳಿದರು.

ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಏರ್ಪಡಿಸಲಾದ ಬೃಹತ್ ರ‍್ಯಾಲಿ ಮತ್ತು ಒಂದು ದಿನದ ಬಂದ್, ಮಹಾರಾಷ್ಟ್ರದಲ್ಲಿ ಅಕ್ಟೋಬರ್ 2ರಂದು ನಡೆದ ಸತ್ಯಾಗ್ರಹ ಮತ್ತು 15ರಂದು ಸಂಘಟಿಸಲಾಗಿರುವ ಬಂದ್ ಇವೇ ಮುಂತಾದ ಸಂಯುಕ್ತ ಸಾಮುದಾಯಿಕ ಹೋರಾಟಗಳು ಜನತೆ ಹೋರಾಟದ ಮಾರ್ಗದಲ್ಲಿ ಮುಂದೊತ್ತಲು ಉತ್ಸುಕರಾಗಿರುವುದನ್ನೂ, ಅವರು ಮುಂದಾಳುಗಳ ಅನುಜ್ಞೆಗಾಗಿ ಕಾಯಲು ಸಿದ್ಧರಿಲ್ಲವೆನ್ನುವುದನ್ನೂ ತೋರಿಸಿಕೊಟ್ಟಿದೆ, ಕಾಂಗ್ರೆಸ್ (ಐ) ಸರಕಾರ ಬೆಲೆಯೇರಿಕೆಯನ್ನು ತಡೆಗಟ್ಟಲು ವಿಫಲವಾಗಿದೆ, ಅದು ನಾಗರಿಕ ಹಕ್ಕುಗಳನ್ನು ಕಬಳಿಸಿ, ಅಧ್ಯಕ್ಷೀಯ ಆಳ್ವಿಕೆಯ ವ್ಯವಸ್ಥೆಯನ್ನು ಜನರ ಮೇಲೆ ಹೇರಲು ಹವಣಿಸುತ್ತಿದೆ ಮತ್ತು ಇರಾನ್ ಇರಾಕ್‌ಗಳ ನಡುವಿನ ದುರದೃಷ್ಟಕರ ಸಂಘರ್ಷದಿಂದುಂಟಾಗುವ ಮುಗ್ಗಟ್ಟಿನ ಹೊರೆಯನ್ನೂ ಜನತೆಯ ಮೇಲೆ ಹೊರಿಸಲಿದೆ ಎಂದು ಶ್ರೀ ಲಿಮಯೆ ಎಚ್ಚರಿಸಿದರು. ಸಮಾವೇಶದ ಹಿನ್ನೆಲೆಯ ಕುರಿತು ಹೇಳಿದ ಅವರು, 'ಈ ಸಮಾವೇಶಕ್ಕೆ ಭಾರ

[ಕಡೆಯ ಪುಟ ನೋಡಿ]

ಪಿ. ಡಬ್ಲ್ಯು. ಡಿ. ದಿನಗೂಲಿ ಕಾರ್ಮಿಕರ ಹೋರಾಟ

ಕರ್ನಾಟಕ ರಾಜ್ಯ ಪಿ. ಡಬ್ಲ್ಯು. ಡಿ. ದಿನಗೂಲಿಗಳು ರಾಯಚೂರು ಜಿಲ್ಲಾ ಮಟ್ಟದಲ್ಲಿ ಸಂಘಟಿತರಾಗಿ ಫೆಡರೇಷನ್ ಸ್ಥಾಪಿಸಿಕೊಂಡು ಸುಮಾರು ಎರಡು ವರ್ಷಗಳಾಯಿತು. ಅಂದಿನಿಂದ ಹಲವಾರು ಸಲ ತಮ್ಮ ತಮ್ಮ ವಿಭಾಗಗಳಿಗೆ ಭೇಟಿಕೊಟ್ಟು ಮಂತ್ರಿಗಳಿಗೆ, ಅಧಿಕಾರಿಗಳಿಗೆ ಮತ್ತು ಇನ್ನಿತರ ಸಂಬಂಧಪಟ್ಟವರಿಗೆ "ನಮ್ಮ ನೌಕರಿ ಖಾಯಂಗೊಳಿಸಿ" ಎಂಬ ಮುಖ್ಯ ಬೇಡಿಕೆಯನ್ನು ಈಡೇರಿಸುವಂತೆ ಮನವಿ ಸಲ್ಲಿಸುತ್ತ ಬಂದಿದ್ದಾರೆ. ತಮ್ಮ ಬೇಡಿಕೆಯತ್ತ ಸರಕಾರದ ಗಮನ ಸೆಳೆಯಲು ತಮ್ಮ ಕುಂದುಕೊರತೆಗಳನ್ನು ನಿವಾರಿಸುವಂತೆ ಒತ್ತಾಯಿಸಿ ರಾಯಚೂರು ಜಿಲ್ಲಾದ್ಯಂತದ ಪಿ. ಡಬ್ಲ್ಯು. ಡಿ. ದಿನಗೂಲಿಗಳು ದಿನಾಂಕ 4-2-80ರಂದು ಒಂದು ದಿನ ಕೆಲಸಕ್ಕೆ ಹಾಜರಾಗದೆ ಸಾರ್ವತ್ರಿಕ ಮುಷ್ಕರ ಆಚರಿಸಿದ್ದರು, ಅಂದು ಜಿಲ್ಲಾಧಿಕಾರಿಗಳ ಮುಖಾಂತರ ಸರಕಾರಕ್ಕೂ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ಮೆರವಣಿಗೆ ಮೂಲಕ ಹೋಗಿ ಮನವಿಪತ್ರಗಳನ್ನು ಸಲ್ಲಿಸಿದ್ದರು. ಅಲ್ಲದೆ, ಶ್ರೀಮಾನ್ ಬಂಗಾರಪ್ಪನವರು ಶ್ರೀ ದೇವರಾಜ ಅರಸರ ಮಂತ್ರಿಮಂಡಲದಲ್ಲಿ ಪಿ. ಡಬ್ಲ್ಯು. ಡಿ. ಮಂತ್ರಿಯಾಗಿದ್ದಾಗ, ದೇವದುರ್ಗ ತಾಲ್ಲೂಕಿನ "ಹೂವಿನ ಹಡಗಿ" ಸೇತುವೆಯನ್ನು ಉದ್ಘಾಟಿಸುವುದಕ್ಕಾಗಿ ದೇವದುರ್ಗಕ್ಕೆ ಭೇಟಿ ಕೊಟ್ಟಿದ್ದರು. ಅಂದು ಫೆಡರೇಷನ್‌ನ ಅಧ್ಯಕ್ಷರಾದ ಕಾಮ್ರೇಡ್ ಎಚ್. ಗೋವಿಂದರೆಡ್ಡಿಯವರು ಮತ್ತು ಇನ್ನಿತರ ಪದಾಧಿಕಾರಿಗಳು ದೇವದುರ್ಗ ಪ್ರವಾಸಿ ಮಂದಿರದಲ್ಲಿ ಮಂತ್ರಿಗಳನ್ನು ಭೇಟಿಯಾಗಿ ಪಿ. ಡಬ್ಲ್ಯು. ಡಿ. ದಿನಗೂಲಿಗಳ ತೊಂದರೆಗಳನ್ನು ವಿವರಿಸಿ ನ್ಯಾಯಯುತವಾದ ಬೇಡಿಕೆಯನ್ನು ಬೇಗ ಈಡೇರಿಸುವಂತೆ ಒತ್ತಾಯಿಸಿದಾಗ ಸಾಧ್ಯವಾದಷ್ಟು ಬೇಗ ನಿಮ್ಮ ಬೇಡಿಕೆಯನ್ನು ಈಡೇರಿಸುವೆನೆಂದು ಅಲ್ಲದೆ ತಾವು ಈ ಇಲಾಖೆಯ ಮಂತ್ರಿಯಾಗಿರುವಾಗಲೇ ನಿಮಗೆ ನ್ಯಾಯ ದೊರಕಿಸಿಕೊಡುವೆನೆಂದು ಕೊಟ್ಟ ವಚನ ಇಂದಿಗೂ ಪಾಲಿಸಲಾಗಿಲ್ಲ. ಈಗಿನ ಮಂತ್ರಿಮಂಡಲದಲ್ಲಿ ಪ್ರಭಾವಶಾಲಿ ಸ್ಥಾನದಲ್ಲಿದ್ದಾಗ್ಯೂ, ಇವರ ಸಮಸ್ಯೆಯ ಬಗ್ಗೆ ಚಕಾರವೆತ್ತಿಲ್ಲ. ಈಗಿನ ಮಂತ್ರಿಮಂಡಲದಲ್ಲಿ ರಾಯಚೂರು ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವ ಮತ್ತು ಮುಖ್ಯಮಂತ್ರಿಗಳಿಗೆ ಬಹಳ ಸನ್ನಿಹಿತವಾದವರು ನಾನು ಎಂದು ಹೇಳಿಕೊಳ್ಳುವ ಶ್ರೀಮಾನ್ ಸುಧೀಂದ್ರ, ಕಸ್ಸೆ ಮಾಜರಾಯ ಮತ್ತು ಮಾರು ಕಟ್ಟಿ ಮಂತ್ರಿಗಳು ಈ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಾಗಲೆಲ್ಲ ಮನವಿ ಪತ್ರಗಳನ್ನು ಅರ್ಪಿಸಿ, ಭೇಟಿಯಾಗಿ ತಮ್ಮ ಕುಂದುಕೊರತೆಗಳನ್ನು ಹಲವಾರು ಸಲ ವಿವರಿಸಿದ್ದಾರೆ. ಆದರೆ ಅವರೂ ಇವರ ಬೇಡಿಕೆಯನ್ನು ಈಡೇರಿಸುವ ಆಸಕ್ತಿ ತೋರಲಿಲ್ಲ. ಕರ್ನಾಟಕದ ವಿಧಾನಸಭಾ ಸದಸ್ಯರುಗಳು ಮತ್ತು ರಾಯಚೂರು ಜಿಲ್ಲೆಯನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರುಗಳಿಗೆ 11-3-80ರಂದು ಬೆಂಗಳೂರಿನಲ್ಲಿ ಫೆಡರೇಷನ್‌ನ ಅಧ್ಯಕ್ಷರು ಭೇಟಿಯಾಗಿ ಮನವಿ ಪತ್ರಗಳನ್ನು ಸಲ್ಲಿಸುತ್ತ ತಮ್ಮ ಬೇಡಿಕೆಯನ್ನು ಬೇಗ ಈಡೇರಿಸುವಂತೆ ಸರಕಾರಕ್ಕೆ ಒತ್ತಾಯಿಸಲು ಮಾಡಿಕೊಂಡ ಮನವಿ ನಿರರ್ಥಕವಾಯಿತು. ದಿನಾಂಕ 21-7-80 ಕರ್ನಾಟಕದ ರಾಜ್ಯಪಾಲರಾದ ಶ್ರೀಮಾನ್ ಗೋವಿಂದ ನಾರಾಯಣರು ರಾಯಚೂರಿಗೆ ಭೇಟಿ ಕೊಟ್ಟಾಗ ಯರಮರಸ್ ಪ್ರವಾಸಿ ಮಂದಿರದಲ್ಲಿ ಅವರನ್ನು ಫೆಡರೇಷನ್‌ನ ಅಧ್ಯಕ್ಷರಾದ ಎಚ್. ಗೋವಿಂದರೆಡ್ಡಿ ಗಿರಿದಾಸ್, ಉಪಾಧ್ಯಕ್ಷರಾದ ಪ್ರಹ್ಲಾದಾಚಾರ್, ಪ್ರಧಾನ ಕಾರ್ಯದರ್ಶಿಗಳಾದ ಪುರುಷೋತ್ತಮ ಕಲಾಲಬಂಡಿಯವರು ಭೇಟಿಯಾಗಿ ಮನವಿ ಪತ್ರ ಸಲ್ಲಿಸಿ ತಮ್ಮ ಅನುಭವಕ್ಕೆ ಬಂದ ತೊಂದರೆಗಳನ್ನೆಲ್ಲ ಸವಿಸ್ತಾರವಾಗಿ ವಿವರಿಸಿದರು. ಸಾಧ್ಯವಾದಷ್ಟು ಬೇಗ ನಿಮ್ಮ ಬೇಡಿಕೆ ಈಡೇರಿಸುವಂತೆ ಸರಕಾರಕ್ಕೆ ತಿಳಿಸುವೆನೆಂದು ಹೇಳಿದ್ದರು. ಆದರೆ ಅದು ಕಾರ್ಯಗತವಾಗಲಿಲ್ಲ.

ಈ ಬಡ ಕಾರ್ಮಿಕರ ಶೋಷಣೆ ಇನ್ನೂ ಮುಂದುವರಿದಿದೆ. ಇಂದಿನ ದಿನಬಳಕೆ ವಸ್ತುಗಳ ಬೆಲೆಏರಿಕೆಯಿಂದಾಗಿ ಇವರಿಗೆ ಸಿಗುವ ಸಂಬಳ ಇವರ ಒಂದು ಹೊತ್ತಿನ ಊಟಕ್ಕೆ ಸಾಲದಾಗಿದೆ.

10-15 ವರ್ಷಗಳಿಂದ ದುಡಿಯುತ್ತಿದ್ದ ಕೆಲವು ದಿನಗೂಲಿಗಳು ದಿನಗೂಲಿಗಳಾಗಿಯೇ ಸತ್ತರು.

ಇನ್ನೂ ಕೆಲವರು ನಿವೃತ್ತಿ ವಯಸ್ಸಿನಲ್ಲಿದ್ದೂ ದಿನಗೂಲಿಗಳಾಗಿಯೇ ದುಡಿಯುತ್ತಿದ್ದಾರೆ.

ಈ ಶೋಷಣೆಯ ವಿರುದ್ಧ ಸರಕಾರದ ವಿಳಂಬ, ನಿರ್ಲಕ್ಷ್ಯತನದ ನೀತಿಯನ್ನು ಪ್ರತಿಭಟಿಸುವಂತೆ ಕರ್ನಾಟಕ ಪಿ. ಡಬ್ಲ್ಯು. ಡಿ. ದಿನಗೂಲಿಗಳ ಫೆಡರೇಷನ್ ರಾಯಚೂರು ಜಿಲ್ಲಾ ಶಾಖೆಯು, 15-9-80 ರಂದು ಒಂದು ದಿನದ ಮುಷ್ಕರವನ್ನು ಆಚರಿಸುವಂತೆ ಕರೆಕೊಟ್ಟಿತ್ತು. ಈ ಕರೆಯ ಮೇರೆಗೆ ಜಿಲ್ಲೆಯ ಸುಮಾರು 260 ದಿನಗೂಲಿಗಳು ದಿನಾಂಕ 15-9-80ರಂದು ಬೆಳಿಗ್ಗೆ 10ಗಂಟೆಗೆಲ್ಲ ರಾಯಚೂರಿನ ನಗರಸಭೆ ಉದ್ಯಾನವನದಲ್ಲಿ ಬಂದು ಸೇರಿದರು. ದೇವದುರ್ಗ, ಮಾನ್ವಿ, ಲಿಂಗಸೂಗೂರು, ಸಿರವಾರ, ಕಲ್ಲೂರು, ಗಬ್ಬೂರು, ಚಂದ್ರಬಂಡಾ, ಕವಿತಾಳ ಮುಂತಾದ ಊರುಗಳಿಂದ ಬಂದ ಪಿ. ಡಬ್ಲ್ಯು. ಡಿ. ದಿನಗೂಲಿಗಳು 11 ಗಂಟೆಗೆ ಮೆರವಣಿಗೆ ಹೊರಟರು. ರಾಯಚೂರಿನ ಮುಖ್ಯ ರಸ್ತೆಗಳಲ್ಲಿ ಘೋಷಣೆಗಳನ್ನು ಕೂಗುತ್ತ ಹೊರಟ ಇವರು 2 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಗೆ ಬಂದು ತಲುಪಿದರು, ಆದರೆ ಅಂದು ಹಳೆ ಕಡತಗಳ ವಿಲೇವಾರಿ ದಿನಾಚರಣೆಯನ್ನು ಆಚರಿಸುತ್ತಿದ್ದ ಜಿಲ್ಲಾಧಿಕಾರಿಗಳು ಇವರ ಮನವಿ ಪತ್ರವನ್ನು ಸ್ವೀಕರಿಸಲು ನಿರಾಕರಿಸಿದರು. ತಮ್ಮ ಮನವಿ ಪತ್ರವನ್ನು ಸ್ವೀಕರಿಸಿದ ಹೊರತು ತಾವು ಅಲ್ಲಿಂದ ಹೊರಡುವುದಿಲ್ಲವೆಂದು ಎಲ್ಲಾ ಕಾರ್ಮಿಕರು ಅಲ್ಲಿಯೇ ಧರಣಿ ಕುಳಿತರು. ಕೊನೆಗೆ ಸಾಯಂಕಾಲ 6-30ಕ್ಕೆ ಇವರ ಒತ್ತಾಯಕ್ಕೆ ಜಿಲ್ಲಾಧಿಕಾರಿಗಳು ಮಣಿದು ಇವರ ಮನವಿ ಪತ್ರವನ್ನು ಸ್ವೀಕರಿಸಿದರು. ಅಲ್ಲಿಂದ ಪ್ರವಾಸಿ ಮಂದಿರದಲ್ಲಿ ತಂಗಿದ್ದ ಬಳ್ಳಾರಿ ವೃತ್ತದ (ರಾಯಚೂರು ವಿಭಾಗ ಇದೇ ವೃತ್ತದಲ್ಲಿದೆ) ಸುಪರಿಂಟೆಂಡಿಂಗ್ ಇಂಜಿನೀಯರ್‌ರಾದ ಶ್ರೀ ಗೋಪಾಲಸ್ವಾಮಿಯವರಿಗೆ ಮನವಿ ಸಲ್ಲಿಸಿ ಸೂಕ್ತ ಆಶ್ವಾಸನೆಯನ್ನು ಪಡೆಯಲಾಯಿತು. ಬೇಡಿಕೆ ಈಡೇರುವ ತನಕ ಹೋರಾಡಲು ಕಾರ್ಮಿಕರು ದೃಢ ನಿರ್ಧಾರ ಮಾಡಿರುವರು.

ಕರ್ನಾಟಕ ರಾಜ್ಯ ಪಿ ಡಬ್ಲ್ಯು. ಡಿ. ದಿನಗೂಲಿಗಳ ಫೆಡರೇಷನ್ ರಾಯಚೂರು ಜಿಲ್ಲೆ ರಾಜ್ಯಾದ್ಯಂತದ ಪಿ. ಡಬ್ಲ್ಯು. ಡಿ. ದಿನಗೂಲಿಗಳು ಸಂಘಟಿತರಾಗಲು ಕರೆಕೊಡುತ್ತದೆ.

ವರದಿ : ಎಚ್. ಗೋವಿಂದರೆಡ್ಡಿ ಗಿರಿದಾಸ್

●

ಕಾಂ. ಲಕ್ಷ್ಮಣಗೌಡರ ಮೇಲಿನ ಹಲ್ಲೆಯ ಖಂಡನೆ

ದ. ಕ. ಜಿಲ್ಲಾ ಪುತ್ತೂರು ತಾಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣ ಗೌಡರನ್ನು ಕೊಲೆಗೈಯ್ಯಲು ಕೆಲವು ಕಿಡಿಗೇಡಿಗಳು ಪ್ರಯತ್ನಿಸುತ್ತಲಿದ್ದು, ರೈತಸಂಘದ ಮುಖಂಡರ ಮೇಲೆ ಹಲವಾರು ಬಾರಿ ಹಲ್ಲೆ ನಡೆದಿದೆ. ಈ ಗೂಂಡಾ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಸುಳ್ಯ ತಾಲೂಕು ರೈತಸಂಘವು, ಈ ದುಷ್ಟ ಯೋಜನೆ ವಿರುದ್ಧ ಸಂಘಟಿತ ಹೋರಾಟ ನಡೆಸಲು ಕರೆ ಇತ್ತಿದೆ.

●

ಗೃಹ ನಿರ್ಮಾಣ ಕೆಲಸಗಾರರ ಸಂಘಟನೆ

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ಸುಮಾರು 5000 ಮನೆಕಟ್ಟುವ ಕೆಲಸಗಾರರಿದ್ದಾರೆ. ಇವರಲ್ಲಿ ಗಾರೆ ಕೆಲಸದವರು, ಬಡಗಿಗಳು, ಕಲ್ಲುಕುಟಿಗರು, ಮರಳು ಗಾಡಿಯವರು, ಪೈಂಟರ್‌ಗಳು ಮತ್ತು ಕಲ್ಲು ಹೊರುವವರು ಎಲ್ಲರೂ ಸುಮಾರು ಎರಡು ತಿಂಗಳಿಂದ ಸಂಘಟನೆಗಾಗಿ ಯತ್ನಿಸುತ್ತಿದ್ದರು. ಇತ್ತೀಚೆಗೆ 2-10-80 ರಂದು ಸುಮಾರು 500 ಕೆಲಸಗಾರರು ಚಿಂತಾಮಣಿಯಲ್ಲಿ ಸಭೆ ಸೇರಿದ್ದರು, ಸಂಘಟನೆಯ ಉದ್ದೇಶಗಳನ್ನು ಶ್ರೀ ಗೋರಣ್ಣ ವಿವರಿಸಿದರು, ಹಿರಿಯ ವಕೀಲ ಮುದ್ದುಕೃಷ್ಣಾಚಾರಿ ಸಂಘಟನೆಯ ಪ್ರಯೋಜನಗಳನ್ನು ವಿವರಿಸಿದರು. ಸಭೆಯಲ್ಲಿ ಹಿರಿಯ ಮೇಸ್ತ್ರಿಗಳು, ಶಿಡ್ಲಘಟ್ಟದ ಮಣಿ, ವೆಂಕಟಾಚಲಪತಿ, ಸಿ.ವಿ ಎಂ. ಸ್ವಾಮಿ ಮತ್ತು ಶ್ರೀನಿವಾಸರೆಡ್ಡಿ ಮಾತನಾಡಿದರು.

ಸಂಘದ ಅಧ್ಯಕ್ಷರಾಗಿ ಶ್ರೀ ಮುದ್ದುಕೃಷ್ಣಾಚಾರಿ, ಉಪಾಧ್ಯಕ್ಷರಾಗಿ ಶ್ರೀ ವೆಂಕಟಾಚಲಪತಿ, ಕಾರ್ಯದರ್ಶಿಯಾಗಿ ಶ್ರೀನಿವಾಸರೆಡ್ಡಿ ಆಯ್ಕೆಯಾಗಿದ್ದಾರೆ. ಒಂದೊಂದು ಪ್ರದೇಶಕ್ಕೆ ಆರು ಸದಸ್ಯರ ಕಾರ್ಯಕಾರಿ ಸಮಿತಿ ಚುನಾಯಿಸಲಾಗಿದೆ.

ಸಿಮೆಂಟಿನ ಕಾಳಸಂತೆ ವ್ಯಾಪಾರ ನಿಲ್ಲದಿದ್ದರೆ ತಾಲ್ಲೂಕು ಕಚೇರಿಯ ಮುಂದೆ ಧರಣಿ ಹೂಡಲು ಎಲ್ಲ ಕೆಲಸಗಾರರು ತೀರ್ಮಾನಿಸಿದ್ದಾರೆ.

○

ಬೆಳ್ತಂಗಡಿಯಲ್ಲಿ ರೈತರ ಧರಣಿ

ದ. ಕನ್ನಡ ಜಿಲ್ಲೆಯ ಬೆಳ್ತಂಗಡಿಯ ರೈತರು, ಕೃಷಿ ಕಾರ್ಮಿಕರು ಸೆಪ್ಟೆಂಬರ್ 29 ರಂದು ಬೃಹತ್ ಪ್ರದರ್ಶನ ನಡೆಸಿದರು ಭಿತ್ತಿಪತ್ರಗಳು, ಕಂಬಾವುಟಗಳ ಅಡಿಯಲ್ಲಿ ರೈತರು ಮೆರವಣಿಗೆ ನಡೆಸಿ ಮಂತ್ರ ಕಚೇರಿಯ ಮುಂದೆ ಧರಣಿ ಕೂತರು. ಬೆಲೆಗಳ ಇಳಿಕೆ, ರೈತರ ಸಾಲ ರದ್ದು, ಬಡ್ಡಿಗಳ ರದ್ದು, ಸಾಗುವಳಿ ಚೀಟಿಗಳು, ರಸಗೊಬ್ಬರದ ಬೆಲೆ ಇಳಿಕೆ, ರೈತರ ಬೆಳೆಗೆ ಸರಿಯಾದ ಬೆಲೆ ನಿಗದಿ ಇವುಗಳನ್ನು ಒತ್ತಾಯಿಸಿ ರೈತರು ಘೋಷಣೆ ಕೂಗುತ್ತಿದ್ದರು. ಪ್ರತಿನಿಧಿಗಳಾದ ಕಾಂ. ಯಳಚಿತ್ತಾಯ, ವಿಷ್ಣುಮೂರ್ತಿ, ಕರಿಯಪ್ಪನಾಯಕ, ಕೇಶವ ಕಕ್ಕಿಂಜೆ, ಅಣ್ಣಿಗೌಡ ನೆರಿಯ, ಕುಟ್ಟಪ್ಪ, ಲಕ್ಷ್ಮಣಗೌಡ, ಮಥಾಯ್ ಇವರು ತಹಸೀಲ್ದಾರರನ್ನು ಭೇಟಿ ಮಾಡಲು ಹೋದಾಗ ಅವರು ಗೈರು ಹಾಜರಿಯಾಗಿದ್ದರು. ಉಪ ಅಧಿಕಾರಿಗಳ ಮುಂದೆ ಚರ್ಚೆ ನಡೆಯಿತು. ನಂತರ ಬಸ್‌ಸ್ಟಾಂಡಿನ ಬಳಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು.

●

ರಬ್ಬರ್‌ತೋಟ ಕಾರ್ಮಿಕರ ಯಶಸ್ವಿ ಹೋರಾಟ

ದ. ಕ. ಜಿಲ್ಲಾ ರಬ್ಬರ್‌ತೋಟ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಎನ್. ಕಾತ ಮುತ್ತು ಅವರ ಮನೆ ಮೇಲೆ ಫಾರೆಸ್ಟ್ ಅಧಿಕಾರಿಗಳು ಅಕ್ರಮ ಪ್ರವೇಶ ಮಾಡಿ ಹಲ್ಲೆ ನಡೆಸಿದ್ದು ಮಾತ್ರವಲ್ಲದೆ ಹದಿಮೂರು ಮಂದಿ ಕೆಲಸಗಾರರನ್ನು ಕೆಲಸದಿಂದ ಅಮಾನತ್ತುಗೊಳಿಸಿದ್ದರು. ಹಲ್ಲೆಯನ್ನು ಪ್ರತಿಭಟಿಸಿ ಮತ್ತು ಕೆಲಸದಿಂದ ಅಮಾನತ್ತುಗೊಳಿಸಿದವರನ್ನು ಕೆಲಸಕ್ಕೆ ಸೇರಿಸುವಂತೆ ಒತ್ತಾಯಿಸಿ ತಾ. 4-9-80 ರಿಂದ ಸುಳ್ಯ ಡಿ. ಎಫ್. ಓ ಕಛೇರಿ ಎದುರು ಸತ್ಯಾಗ್ರಹ ನಡೆಸಲಾಯಿತು. ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಂಡು ಅಮಾನತ್ತುಗೊಳಿಸಿದವರಿಗೆ ಹಿಂದಿನ ಸಂಬಳವೂ ಸೇರಿ ಮತ್ತೆ ಕೆಲಸ ದೊರೆತು ಹೋರಾಟವು ಯಶಸ್ವಿಯಾಗಿ ಮುಕ್ತಾಯವಾಗಿದೆ. ಕಾಂ. ಸೂರ್ಯನಾರಾಯಣ ಭಟ್, ಕಾಂ. ಪಿ. ಕೆ. ಮೂಸಾ, ಕಾಂ. ಕಾತಮುತ್ತು, ಕಾಂ. ಮೋನಪ್ಪಗೌಡ - ಮೊದಲಾದವರು ಹೋರಾಟದ ಮುಂಚೂಣಿಯಲ್ಲಿದ್ದರು. ತಾಲೂಕು ರೈತಸಂಘ, ಎಸ್. ಎಫ್. ಐ. ಗಳೂ ಸಂಪೂರ್ಣ ಬೆಂಬಲಿಸಿದ್ದುವು.

●

ರಾಯಚೂರಿನಲ್ಲಿ ಮಹಿಳಾ ಸಂಘಟನೆಯ ಕಾರ್ಯಕ್ರಮ

ರಾಯಚೂರಿನ ಪ್ರಗತಿಪರ ಮಹಿಳಾ ಸಂಘವು ಸೆಪ್ಟೆಂಬರ್ 21 ರಂದು ಒಂದು ವಿಚಾರಸಂಕಿರಣವನ್ನು ಏರ್ಪಡಿಸಿತ್ತು. ಪ್ರಾರಂಭದಲ್ಲಿ ಶ್ಯಾಮಲಾ ಅವರು ಸ್ವಾಗತಿಸಿ, ಸಂಘದ ಉದ್ದೇಶಗಳ ಕರಡು ಪ್ರತಿಯನ್ನು ಸಭೆಗೆ ಮಂಡಿಸಿದರು.

ನಂತರ ಲಲಿತಾ ನಾಯಕ ಅವರು ಮಾತನಾಡಿ ಮಹಿಳೆಯರು ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆಯಿತ್ತರು. ಹರಿಣಿ ಅವರು ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ವಿವರಿಸಿ ವರ್ಷದಲ್ಲಿ 25,000 ಅತ್ಯಾಚಾರಗಳು ನಡೆಯುತ್ತಿವೆ ಇದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ಖಂಡಿಸಿದರು.

ಅಧ್ಯಕ್ಷ ಸ್ಥಾನ ವಹಿಸಿದ್ದ ಎಸ್. ಶಿವಾನಂದ ಮಹಿಳೆಯ ಸ್ಥಾನಮಾನ ಈಗಿನ ಸ್ಥಿತಿಗೆ ಇಳಿದಿರುವುದಕ್ಕೆ ಚಾರಿತ್ರಿಕ ಕಾರಣಗಳನ್ನು ಗುರುತಿಸಿದರು.

○

ಮಹಾರಾಷ್ಟ್ರದಲ್ಲಿ ೩೦ ಸಾವಿರ ಜನರ ಬಂಧನ

ಗಗನಕ್ಕೇರುತ್ತಿರುವ ಬೆಲೆಯೇರಿಕೆಯಿಂದ ಕಂಗಾಲಾದ ಮಹಾರಾಷ್ಟ್ರದ ದುಡಿಯುವ ಜನತೆ ರೊಚ್ಚಿಗೆದ್ದು ಹೋರಾಟದ ಪಥದಲ್ಲಿಳಿದಿದ್ದಾರೆ. ಪ್ರತ್ಯೇಕ ಪ್ರತ್ಯೇಕ ಹೋರಾಟಗಳಿಂದ ಜನವಿರೋಧಿ ಇಂದಿರಾ ಸರಕಾರದ ಮೇಲೆ ಸಾಕಷ್ಟು ಪರಿಣಾಮವಾಗುವುದಿಲ್ಲೆಂದು ತಮ್ಮ ಅನುಭವದಿಂದಲೇ ಕಂಡುಕೊಂಡ ವಿರೋಧಿ ಪಕ್ಷಗಳು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ "ಐಕ್ಯತೆಯಿಂದ ಹೋರಾಡೋಣ"ವೆಂದು ಕರೆ ಕೊಟ್ಟಾಗ ಅದಕ್ಕೆ ಓಗೊಟ್ಟು ಅರಸ ಕಾಂಗ್ರೆಸ್, ಜನತಾ ಪಾರ್ಟಿ, ರಿಪಬ್ಲಿಕನ್ ಪಾರ್ಟಿ, ದಲಿತ ಸಂಘರ್ಷ ಸಮಿತಿ, ಭಾರತ ಕಮ್ಯುನಿಸ್ಟ್ ಪಾರ್ಟಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ಅವುಗಳ ನೇತೃತ್ವದ ಸಾಮೂಹಿಕ ಸಂಘಟನೆಗಳೆಲ್ಲ ಎಡ ಮತ್ತು ಪ್ರಜಾಪ್ರಭುತ್ವ ರಂಗ ರಚಿಸಿ, ಬೆಲೆಯೇರಿಕೆ, ಮಹಿಳೆಯರ ಮೇಲಿನ ಅತ್ಯಾಚಾರ ದಲಿತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳ ವಿರುದ್ಧ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದರ ಪ್ರಥಮ ಅಂಗವಾಗಿ ಅಕ್ಟೋಬರ್ 2 ರಂದು ಮುಂಬಯಿಯಲ್ಲಿ 30000 ಜನರು, (ಇದರಲ್ಲಿ ಹಲವಾರು ಕಾರ್ಖಾನೆಗಳ ಕಾರ್ಮಿಕರು, ಗುಡಿಸಲು ವಾಸಿಗಳೂ, 5 ಸಾವಿರಕ್ಕೂ ಮೇಲ್ಪಟ್ಟು ಮಹಿಳೆಯರೂ) ಪ್ರತಿಬಂಧಕಾಜ್ಞೆ ಮುರಿದು ಬಂಧಿತರಾದರು, ಮಹಾರಾಷ್ಟ್ರದ ಇನ್ನಿತರ ಕಡೆಗಳಲ್ಲೂ ಸಾವಿರಾರು ಜನ ಬಂಧಿತರಾದುದಲ್ಲದೆ, ಕೆಲವೆಡೆ ಪೋಲೀಸರು ಲಾಠಿಚಾರ್ಜು, ಅಶ್ರುವಾಯು ಪ್ರಯೋಗ ಮಾಡುವ ಪರಿಸ್ಥಿತಿ ಉಂಟಾಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡರಾದ ಪಿ. ಕೆ. ಕುರುಣೆ, ಅರಸ ಕಾಂಗ್ರೆಸ್ಸಿನ ಮಾಜಿ ಮುಖ್ಯಮಂತ್ರಿ ಶರದ ಪವಾರ ಮೊದಲಾದವರು ಸತ್ಯಾಗ್ರಹದ ಮುಖಂಡತ್ವ ವಹಿಸಿದ್ದರು. ಕರ್ನಾಟಕದ ದುಡಿಯುವ ಜನರ ಪರವಾಗಿ ನಾನೂ ಸತ್ಯಾಗ್ರಹದಲ್ಲಿ ಭಾಗವಹಿಸುವ ಸದವಕಾಶ ದೊರಕಿತ್ತು.

ಕರ್ನಾಟಕ – ಆಂಧ್ರಪ್ರದೇಶದ ವಿರೋಧಿ ಪಕ್ಷಗಳ ನೇತೃತ್ವದಲ್ಲಿ ದುಡಿಯುವ ಜನತೆ ಸರ್ವಾಧಿಕಾರಿ, ಜನತಾ ವಿರೋಧಿ ಇಂದಿರಾಗಾಂಧಿಯ ಆರ್ಥಿಕ ರಾಜಕೀಯ ನೀತಿಯ ವಿರುದ್ಧ ನಡೆಸುತ್ತಿರುವ ಐಕ್ಯತಾ ಹೋರಾಟದಿಂದ ಸ್ಫೂರ್ತಿಗೊಂಡ ಮಹಾರಾಷ್ಟ್ರ ಜನತೆಯೂ ಒಗ್ಗಟ್ಟಾಗಿ ಹೋರಾಡುವ ನಿರ್ಣಯ ಕೈಗೊಂಡಿದ್ದಾರೆ. ಪ್ರಥಮ ಹಂತದ ಕಾರ್ಯಕ್ರಮ ಯಶಸ್ವಿಯಾಗಿದ್ದು, ಎರಡನೇ ಹಂತದಲ್ಲಿ ತಾ. 13 ರಂದು ವಿಧಾನ ಸೌಧದೆದುರು ಮುಂಬಯಿಯಲ್ಲಿ ಬೃಹತ್ ಮೋರ್ಚಾ, ಕೊನೆಯದಾಗಿ ತಾ. 15 ರಂದು ಮಹಾರಾಷ್ಟ್ರ ಬಂದ್ ಆಚರಿಸಲಾಗುವುದು. ಆ ದಿವಸ ರೈಲ್ವೆ ಸಂಚಾರ ಕೂಡಾ ಬಂದ್ ಮಾಡಬೇಕೆಂಬ ಕರೆ ಕೊಡಲಾಗಿದೆ.

ದುಡಿಯುವ ಮಹಿಳೆಯರಲ್ಲಿ ಮತ್ತು ಜನತೆಯಲ್ಲಿರುವ ಹೋರಾಟದ ಸ್ಫೂರ್ತಿ ಪ್ರಶಂಸನೀಯವಾಗಿದ್ದು "ಇಂದಿರಾ ಸರಕಾರದ ವಿರುದ್ಧ, ಜೀವ ಕೊಟ್ಟಾದರೂ ಹೋರಾಟ ಮಾಡಬೇಕೆಂಬ ದೃಢನಿರ್ಧಾರವನ್ನು ಮಹಾರಾಷ್ಟ್ರದ ಜನತೆ ಕೈಕೊಂಡಂತೆ ಕಂಡುಬರುತ್ತಿತ್ತು".

ವರದಿ : ಎನ್. ಕೆ. ಉಪಾಧ್ಯಾಯ

ರಿಕ್ಷಾ ಚಾಲಕರ ಹೋರಾಟಕ್ಕೆ ಬೆಂಬಲ

ದ. ಕ. ಜಿಲ್ಲೆಯ ರಿಕ್ಷಾಚಾಲಕರ ಹೋರಾಟಕ್ಕೆ ಜಿಲ್ಲೆಯ ಸಿ. ಐ. ಟಿ. ಯು. ಸಮಿತಿಯು ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ಜಿಲ್ಲೆಯ ಸಿ. ಐ. ಟಿ. ಯು. ಗೆ ಸೇರಿದ ಎಲ್ಲಾ ಸಂಘಗಳೂ ರಿಕ್ಷಾಚಾಲಕರ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಸಿ. ಐ. ಟಿ. ಯು. ಜಿಲ್ಲಾ ಕಾರ್ಯದರ್ಶಿ ಕಾಂ. ಮೂಸಬ್ಬ ಕರೆ ಕೊಟ್ಟಿದ್ದಾರೆ.

ಸರಕಾರ ರಿಕ್ಷಾಚಾಲಕರ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಜಿಲ್ಲಾ ಸಿ. ಐ. ಟಿ. ಯು. ಸಮಿತಿ ಕರೆಕೊಡುತ್ತದೆ.

○

ಅಸ್ಸಾಂ ಸಮಸ್ಯೆಯಲ್ಲಿ ಅಡಕವಾಗಿರುವ ಪ್ರಶ್ನೆಗಳು

(5ನೇ ಪುಟದಿಂದ)

ಯಲ್ಲ; ಬದಲು ಸಾಧ್ಯವಿದ್ದ ಕಡೆಯೆಲ್ಲ ಕಾರ್ಯರೂಪಕ್ಕೆ ತರಬೇಕಾದಂತಹ ಘೋಷಣೆ. ಉದಾಹರಣೆಗೆ ತ್ರಿಪುರಾದ ಎಡರಂಗ ಸರಕಾರವು ಬುಡಕಟ್ಟು ಜನರು ಅಧಿಕವಾಗಿರುವ ಪ್ರದೇಶಗಳನ್ನು ಒಂದುಗೂಡಿಸಿ ಸ್ವಾಯತ್ತ ಜಿಲ್ಲಾ ಕೌನ್ಸಿಲನ್ನು ನಿರ್ಮಿಸುವ ಮೂಲಕ ಈ ಬೇಡಿಕೆಯನ್ನು ಭಾಗಶಃ ಈಡೇರಿಸಿದೆ.

ವಿಛಿದ್ರಕಾರಿ ಕೇಂದ್ರೀಕರಣ

ನಮ್ಮ ಸಂವಿಧಾನವು ಔಪಚಾರಿಕವಾಗಿ ರಾಜ್ಯಗಳಿಗೆ ಸ್ವಾಯತ್ತಾಧಿಕಾರವನ್ನು ನೀಡಿದ್ದರೂ ಅದು ತನ್ನ ಈ ಸ್ವರೂಪವನ್ನು ಕಳೆದುಕೊಂಡು ಕೇಂದ್ರೀಕರಣ ವ್ಯವಸ್ಥೆಗೇ ಹೆಚ್ಚು ಹೆಚ್ಚಾಗಿ ಪರಿವರ್ತಿತವಾಗುತ್ತಿರುವುದು ಕಳೆದ 28 ವರ್ಷಗಳಲ್ಲಿ ಸಂವಿಧಾನವು ಕಾರ್ಯವಹಿಸಿದ ರೀತಿಯಲ್ಲಿ ಗೊತ್ತಾಗುತ್ತದೆ. ರಾಜ್ಯಗಳ ಮೇಲೂ ರಾಜ್ಯಗಳಲ್ಲಿರುವ ಬುಡಕಟ್ಟು ಜನರ ಮೇಲೂ ಕೇಂದ್ರೀಕೃತ ವ್ಯವಸ್ಥೆಯನ್ನು ಹೇರುವ ಪ್ರಯತ್ನಗಳು ಭಾರತದ ಒಕ್ಕಟ್ಟನ್ನು ಬಲಪಡಿಸುವ ಬದಲು ಅದನ್ನು ದುರ್ಬಲಗೊಳಿಸುತ್ತಿವೆ. ರಾಜ್ಯಗಳಿಗೆ ಸಾಧ್ಯವಿದ್ದಷ್ಟು ವ್ಯಾಪಕ ಪ್ರಮಾಣದ ಸ್ವಾಯತ್ತತೆ ನೀಡುವುದು ಮತ್ತು ಹಲವು ರಾಜ್ಯಗಳೊಳಗಿನ ಬುಡಕಟ್ಟು ಜನರೇ ಅಧಿಕವಾಗಿರುವ ಪ್ರದೇಶಗಳಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡುವುದು ಈ ಸೂತ್ರಗಳನ್ನು ಒಪ್ಪಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಭಾರತದ ಒಗ್ಗಟ್ಟನ್ನು ಉಳಿಸಿ ಬಲಪಡಿಸಿಕೊಳ್ಳಲು ಸಾಧ್ಯ.

ಅಸ್ಸಾಂ ಚಳುವಳಿಯ ಬಗ್ಗೆ ಮಾತುಕತೆ ನಡೆಸುತ್ತಿರುವ ಚಳುವಳಿಗಾರರ ನಿಯೋಗವಾಗಲೀ, ಕೇಂದ್ರ ಸರಕಾರದ ಪ್ರತಿನಿಧಿಗಳ ತಂಡವಾಗಲೀ ಈ ಪ್ರಾಮಾಣಿಕ ನಿಲುವೆಯನ್ನು ಅಂಗೀಕರಿಸಲು ಮುಂದಾಗುತ್ತಿಲ್ಲವೆನ್ನುವುದು ಈಗ ನಡೆಯುತ್ತಿರುವ ಮಾತುಕತೆಗಳ ಸ್ವರೂಪದಿಂದ ವ್ಯಕ್ತವಾಗುತ್ತಿದೆ.

●

ಬೀಡಿ ಮಜೂರರ ಬೃಹತ್ ಮತಪ್ರದರ್ಶನ

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ ನಿರ್ಣಯದಂತೆ ಮಂಗಳೂರು ತಾಲ್ಲೂಕಿನ ಮೂಲ್ಕಿ, ಪದವು, ಕುಪ್ಪೆಪದವು, ಕೊಕ್ಕೊಟ್ಟು ಬಜಾಲ್, ಜಪ್ಪಿನ ಮೊಗರು, ಬೈಕಂಪಾಡಿ ಮತ್ತು ಬೋಳಾರ ಮುಂತಾದ ಕಡೆಗಳಿಂದ ಸಮಾವೇಶಗೊಂಡು ಸುಮಾರು ಎಂಟುಸಾವಿರಕ್ಕಿಂತಲೂ ಹೆಚ್ಚು ಬೀಡಿ ಮಜೂರರು ಮತಪ್ರದರ್ಶನ ನಡೆಸಿದರು.

1976ರಿಂದ ಕಾರ್ಮಿಕರ ಸಂಬಳದಿಂದ ಪ್ರಾವಿಡೆಂಟ್ ಫಂಡಿಗಾಗಿ ಹಣವನ್ನು ಕಡಿತಮಾಡಿಕೊಳ್ಳುತ್ತಿದ್ದರೂ ಇವತ್ತಿನವರೆಗೆ ಲೆಕ್ಕದ ಮಾಹಿತಿಯನ್ನು ಒದಗಿಸಲಾಗಿಲ್ಲ. ಅನೇಕ ವರ್ಷಗಳಿಂದ ಕೆಲಸಮಾಡುತ್ತಿದ್ದ ಕಾರ್ಮಿಕರಿಗೆ ವೇಜ್‌ಸ್ಲಿಪನ್ನು ಕೊಡುತ್ತಿಲ್ಲ. ಮಾಲೀಕರ ಇಷ್ಟದ ಪ್ರಕಾರ ಆ್ಯವರೇಜ್ ನಿಗದಿಪಡಿಸಿದ್ದರಿಂದ ಕಾರ್ಮಿಕರಿಗೆ ವಿಪರೀತ ತೊಂದರೆಯಾಗಿದೆ. ಕೆಲಸಗಾರರಿಗೆ ವಾರದಲ್ಲಿ ಮೂರು ದಿನಗಳಿಗೆ ಮಾತ್ರ ಸಾಕಾಗುವಷ್ಟು ಕಚ್ಚಾ ಮಾಲನ್ನು ಪೂರೈಸುವುದರಿಂದ, ನಾಲ್ಕು ದಿನಗಳು ಕಾರ್ಮಿಕರು ಉಪವಾಸ ಬೀಳಬೇಕಾಗಿದೆ. ಈ ರೀತಿಯ ಅಪಾರ ತೊಂದರೆಗಳಿಂದ ಬಳಲುತ್ತಿರುವ ಬೀಡಿಮಜೂರರು ತಮ್ಮ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಮೆರವಣಿಗೆ ಏರ್ಪಡಿಸಲಾಗಿತ್ತು.

ಹೆಚ್ಚಿನಂಶ ಮಹಿಳೆಯರು ಒಳಗೊಂಡಿದ್ದ ಬೃಹತ್ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ತಮ್ಮ ಸಮಸ್ಯೆಗಳ ಬಗ್ಗೆ ಮನವಿಕೊಟ್ಟರು. ನಂತರ ಮೆರವಣಿಗೆ ಬೀಡಿ ಮಾಲೀಕರ ಸಂಘದ ಅಧ್ಯಕ್ಷರ ಆಫೀಸಿಗೂ ತೆರಳಿ ಮನವಿ ಅರ್ಪಿಸಲಾಯಿತು. ಮೆರವಣಿಗೆಯನಂತರ ನಡೆದ ಬಹಿರಂಗ ಸಭೆಯಲ್ಲಿ ಬೀಡಿಮಜೂರರ ಫೆಡರೇಶನ್‌ನ ಅಧ್ಯಕ್ಷ ಕಾಂ. ಬಿ. ರಾಮಚಂದ್ರರಾವ್, ಕಾರ್ಯದರ್ಶಿ ಕಾಂ. ಮೂಸಬ್ಬ, ಜೆ. ವೀರಪ್ಪ, ಯು. ಬಿ. ಲೋಕಯ್ಯ ಮತ್ತು ಕಾಂ. ಕಮಲಾಕ್ಷ ಬಂಗೇರ ಮುಂತಾದವರು ಮಾತನಾಡಿ ಸಮಸ್ಯೆಗಳನ್ನು ಬಗೆಹರಿಸಲು ಶೀಘ್ರಕ್ರಮ ವಹಿಸದಿದ್ದರೆ ತೀವ್ರ ಹೋರಾಟವನ್ನು ಕೈಗೊಳ್ಳುವ ಮುನ್ನೆಚ್ಚರಿಕೆಯನ್ನು ಅಧಿಕಾರಿಗಳಿಗೂ, ಮಾಲೀಕರಿಗೂ ಕೊಡಲಾಯಿತು.

●

ಕಾಂ. ಖಮರುದ್ದೀನರ ನಿಧನ

ತೆಲಂಗಾಣಾ ರೈತರ ವೀರೋಚಿತ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದ್ದ ಬೀದರಿನ ಕಾಂ. ಖಮರುದ್ದೀನ್ ಇನ್ನಿಲ್ಲ.

ಹೈದರಾಬಾದ್ ಕರ್ನಾಟಕದಲ್ಲಿ ಕಾರ್ಯಪ್ರವೃತ್ತರಾಗಿದ್ದ ಕಾಂ. ಖಮರುದ್ದೀನ್ ತಮ್ಮ ಯೌವ್ವನದ 16 ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದರು.

ಕಾಂ. ಸಂಗ್ರಾಮರ ಮನೆಯಲ್ಲಿ, ಪಾರ್ಟಿಯ ಸಂಘಟನೆ ಬಗ್ಗೆ ಚರ್ಚೆ ನಡೆಸುತ್ತಿದ್ದಾಗಲೇ ಹೃದಯಾಘಾತಕ್ಕೀಡಾದ ಕಾಂ. ಖಮರುದ್ದೀನರಿಗೆ 60 ವರ್ಷ ವಯಸ್ಸಾಗಿದ್ದಿತು.

ಕಾಂ. ಖಮರುದ್ದೀನರ ನಿಧನಕ್ಕೆ ಐಕ್ಯರಂಗ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

●

ತಲಚೇರಕರ್ ರಂಗರಾಯರು ಇನ್ನಿಲ್ಲ

ಸ್ವಾತಂತ್ರ್ಯ ಪೂರ್ವದಿಂದಲೂ ಕಮ್ಯುನಿಸ್ಟ್ ಚಳುವಳಿಯೊಂದಿಗೆ ನಿಕಟ ಬಾಂಧವ್ಯವನ್ನಿಟ್ಟುಕೊಂಡಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ದುಡಿಯುವ ಜನತೆಯ ಪರವಾಗಿ ವಾದಿಸುತ್ತಿದ್ದ ಖ್ಯಾತ ವಕೀಲ ತಲಚೇರಕರ್ ರಂಗರಾಯರು ದಿನಾಂಕ 19-9-80 ರಂದು ಬೆಳಗಾಂನಲ್ಲಿ ನಿಧನರಾದರು.

ದ. ಕ. ಜಿಲ್ಲೆಯ ರಂಗರಾಯರು ಚಿಕ್ಕಂದಿನಿಂದಲೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಜೈಲುವಾಸವನ್ನು ಅನುಭವಿಸಿದ್ದರು.

1953ರಲ್ಲಿ ಮಂಗಳೂರಿನ ಹಂಚಿನ ಕಾರ್ಮಿಕರ ವೀರೋಚಿತ ಹೋರಾಟದ ಕಾಲದಲ್ಲಿ, ಕಾರ್ಮಿಕ ಮುಖಂಡರಾಗಿದ್ದ ಕಾಂ. ಕೃಷ್ಣಶೆಟ್ಟಿ, ಕಾಂ. ಕೊರಗಪ್ಪ ರೈ, ಕಾಂ. ಸಿಂಪ್ಸನ್ ಸೋನ್ಸ್, ಕಾಂ. ವಾಮನಕೊಡಿಯಾಲಬೈಲ್ ಮತ್ತು ಮೂವರು ಕಾರ್ಮಿಕರ ಮೇಲೆ ಸರಕಾರ ಮತ್ತು ಮಾಲೀಕರು ಪಿತೂರಿಯಿಂದ ಹೂಡಿದ್ದ ಕೊಲೆ ಮೊಕದ್ದಮೆಯಲ್ಲಿ ಕೃಷ್ಣಐಯ್ಯರ್ (ಪ್ರಸಕ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶ)ರೊಟ್ಟಿಗೆ ರಂಗರಾಯರು ಮದ್ರಾಸ್ ಹೈಕೋರ್ಟಿನಲ್ಲಿ ವಾದಿಸಿ ಗೆದ್ದಿದ್ದರು.

ಮಂಗಳೂರಿನಲ್ಲಿ 50ರ ದಶಕದಲ್ಲಿ ಪ್ರಾರಂಭಿಸಲ್ಪಟ್ಟಿದ್ದ "ಪ್ರಗತಿಪರ ಜನರಂಗ" ವೇದಿಕೆಯ ಅಧ್ಯಕ್ಷರಾಗಿದ್ದರು. ಪುರೋಗಾಮಿ ಸಾಹಿತ್ಯ ಚಳುವಳಿಯ ಮುಂಚೂಣಿಯಲ್ಲಿದ್ದ ರಂಗರಾಯರು ಮಿಂಡಾವಸಿಲೆವಸ್ಕಾರ "ಇಂದ್ರಚಾಪ", ಶೊಲಕೋವ್‌ರವರ "ಹೊಸಭೂಮಿ-ಹೊಸಬಾಳು" ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದರು.

ತಲಚೇರಕರ್‌ರ ನಿಧನ ಎಡಪಂಥೀಯ ಚಳುವಳಿಗೆ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತುಂಬಲಾರದ ಹಾನಿ.

ಅವರ ಸ್ಮರಣೆಗೆ "ಐಕ್ಯರಂಗ" ಶ್ರದ್ಧಾಂಜಲಿ ಅರ್ಪಿಸುತ್ತದೆ. ಅವರ ಕುಟುಂಬದವರ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

●

ತಿದ್ದುಪಡಿ

ಐಕ್ಯರಂಗದ ತಾ. 5-10-80ರ ಸಂಚಿಕೆಯಲ್ಲಿ 6ನೇ ಪುಟದಲ್ಲಿ "ಪತ್ರಿಕೆಗಳ ಮೇಲಿನ ಹಲ್ಲೆಯ ಖಂಡನೆ" ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ಸುದ್ದಿಯಲ್ಲಿ ಕಾಂ. ಎ. ಕೆ. ವಿಶ್ವನಾಥ ಅವರು ಸಿ. ಪಿ. ಐ (ಎಂ) ಚಿಕ್ಕಮಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂದು ತಪ್ಪಾಗಿ ವರದಿ ಆಗಿತ್ತು. ಇದ್ದಿಯವರು ಪಕ್ಷದ ಚಿಕ್ಕಮಗಳೂರು ಶಾಖೆಯ ಕಾರ್ಯದರ್ಶಿಯವರಾಗಿದ್ದಾರೆ.

○

ಈ ಸಮ್ಮೇಳನದಲ್ಲಿ ಜಮ್ಮು-ಕಾಶ್ಮೀರಕ್ಕೆ ಸ್ವಯಂನಿರ್ಧಾರದ ಕೇಳಿಕೆಯನ್ನು ಮಂಡಿಸಲಾಯಿತು ಎಂದು ಗಮನಿಸಿದರೆ ಅದರ ಅಪಾಯಕಾರೀ ಪರಿಣಾಮವನ್ನು ಸ್ಪಷ್ಟವಾಗಿ ಊಹಿಸಿಕೊಳ್ಳಬಹುದು.

ಜಾತ್ಯತೀತ ನಿಲುವು ಅಗತ್ಯ

ಆದರೆ ಇಸ್ಲಾಮಿಕ್ ಪುನರುತ್ಥಾನವಾದದ ಈ ಅಪಾಯವನ್ನು ಎದುರಿಸಬೇಕಾದರೆ ಭಾರತದ ಜನ, ಅವರ ರಾಜಕೀಯ ಸಂಘಟನೆಗಳು ಹಾಗೂ ಸರಕಾರ ಎಲ್ಲಾ ಮುಖ್ಯ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಶ್ನೆಗಳ ಬಗ್ಗೆ ನಿಜವಾದ ಜಾತ್ಯಾತೀತ ನಿಲುವು ತಳೆಯಬೇಕು. ಇದರ ಬದಲು ಇಸ್ಲಾಮಿಕ್ ಪುನರುತ್ಥಾನವಾದವನ್ನು ಹಿಂದೂ ಪುನರುತ್ಥಾನವಾದದ ಮೂಲಕ ಎದುರಿಸಬಯಸಿದರೆ(ಆರ್. ಎಸ್. ಎಸ್. ಬಯಸುವಂತೆ) ಲಾಭವಾಗುವುದು ಎರಡೂ ಕೋಮುಗಳಲ್ಲಿರುವ ಪುನರುತ್ಥಾನವಾದಿಗಳಿಗೆ ಮಾತ್ರ. ಮುಸ್ಲಿಂ ಸಂಘಟನೆಗಳು ಹಾಗೂ ನಾಯಕರು ಪ್ರಕಟಿಸುತ್ತಿರುವ ಸಂಕುಚಿತವಾದ, ಅವರು ಬೆಳೆಸಬಯಸುವ, ವಾಸ್ತವದಲ್ಲಿ ಪ್ರತ್ಯೇಕತಾ ಮನೋರೂಪ ಪಡೆಯುವ ಚಳವಳಿಗಳು: 'ಮುಸ್ಲಿಮರು ವಿದೇಶೀಯರು, ಅವರಿಗೆ ಭಾರತದ ರಾಷ್ಟ್ರೀಯ ಮುಖ್ಯ ಭಾಷೆಯಲ್ಲಿ ಗೌರವಯುತ ಸ್ಥಾನ ಸಾಧ್ಯವಿಲ್ಲ' ಎಂಬ ಆರ್. ಎಸ್. ಎಸ್. ನಿಲುವನ್ನು ಮತ್ತಷ್ಟು ದೃಢಗೊಳಿಸುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಆರ್. ಎಸ್. ಎಸ್. ನ 'ಹಿಂದೂರಾಷ್ಟ್ರ' ಸಿದ್ಧಾಂತ ಮತ್ತು ಜಮಾತ್-ಎ-ಇಸ್ಲಾಮೀ ಹಾಗೂ ಇತರ ಸಂಸ್ಥೆಗಳ ಇಸ್ಲಾಮಿಕ್ ಪುನರುತ್ಥಾನದ ಸಿದ್ಧಾಂತ ಎರಡೂ ಪರಸ್ಪರ ಪೂರಕವಾಗಿ ಒಂದನ್ನೊಂದು ಬಲಪಡಿಸುತ್ತದೆ.

ಆದ್ದರಿಂದ ಕೋಮು ಪರಿಸ್ಥಿತಿ ಹದಗೆಡುವುದನ್ನು ತಪ್ಪಿಸಬೇಕಾದರೆ ಈ ಎರಡು ಅಪಾಯಕಾರೀ ಸಿದ್ಧಾಂತಗಳ ಹಾಗೂ ಅವನ್ನು ಪ್ರತಿನಿಧಿಸುವ ಸಂಸ್ಥೆಗಳ ವಿರುದ್ಧ ಒಂದು ಸಂಯುಕ್ತ ಪ್ರಚಾರ ಕಾರ್ಯ ನಡೆಯಬೇಕಾದದ್ದು ಬಹಳ ಅಗತ್ಯ. ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳು ಈ ಎರಡು ಅಪಾಯಕಾರೀ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಒಂದಾಗದಿದ್ದರೆ ಆಡಳಿತ ಕ್ರಮಗಳು ರಾಷ್ಟ್ರೀಯ ಏಕತಾ ಸಮಿತಿ ಇತ್ಯಾದಿ ಯಾವುದೇ ಕ್ರಮಗಳು ಸಮಸ್ಯೆಯನ್ನು ಬಗೆಹರಿಸಲಾರವು.

ದಾಖಲೆ ಗೌರವಯುತವಾಗಿಲ್ಲ

ಈ ದೃಷ್ಟಿಯಿಂದ ನೋಡಿದರೆ ಆಡಳಿತ ಪಕ್ಷದ ದಾಖಲೆಯೂ ಗೌರವಯುತವಾಗಿಲ್ಲ. ಇದೇ ಈಗ ಕಾಂಗ್ರೆಸ್ (ಐ) ಕನಿಷ್ಟ ಒಂದು ರಾಜ್ಯ (ಕೇರಳ) ದಲ್ಲಿ ಭಾರತೀಯ ಜನತಾ ಪಕ್ಷ(ಬಿ. ಜೆ.ಪಿ)ದೊಂದಿಗೆ ಚುನಾವಣಾ ಮೈತ್ರಿ ಹೊಂದಿದೆ. ಬಿ.ಜೆ.ಪಿ , ಆರ್.ಎಸ್. ಎಸ್.ನ ಪ್ರತ್ಯಕ್ಷ ಸಂಘಟನೆಯೆಂಬುದು ಎಲ್ಲರಿಗೂ ಗೊತ್ತಿದೆ ಅಲ್ಲದೆ ಕಾಂಗ್ರೆಸ್ (ಐ) ಈಗ ಅದೇ ರಾಜ್ಯದ ವಿರೋಧ ಪಕ್ಷಗಳ ಒಂದು ಸಮೂಹದ ನಾಯಕತ್ವ ವಹಿಸಿದೆ. ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್ ಕೂಡಾ ಈ ಸಮೂಹದ ಜತೆಗೆ ಇದೆ. ತಾನು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ತಿರಸ್ಕರಿಸಿರುವ ಬೇಡಿಕೆಗಳಿಗಾಗಿಯೇ ಕಾಂಗ್ರೆಸ್ (ಐ) ನಾಯಕತ್ವದ ಈ ಸಮೂಹ ಕೇರಳದಲ್ಲಿ ಪ್ರಚಾರ ನಡೆಸುತ್ತಿದೆ. (ಇಲ್ಲಿ ಹೇಳುತ್ತಿರುವುದು ಕೇರಳದಲ್ಲಿ ಅರೇಬಿಕ್ ಮತ್ತು ಉರ್ದುವನ್ನು ಕಲಿಸುವ ವಿಷಯದ ಬಗ್ಗೆ ವಿರೋಧ ಪಕ್ಷಗಳು ನಡೆಸುತ್ತಿರುವ ಸಂಯುಕ್ತ ಚಳವಳಿಯನ್ನು ಕುರಿತು. ಈ ಬೇಡಿಕೆಯನ್ನು ಉತ್ತರ ಪ್ರದೇಶ, ಬಿಹಾರದಂತ ರಾಜ್ಯಗಳಲ್ಲಿ ಪುರಸ್ಕರಿಸಿಲ್ಲ, ಮಾತ್ರವಲ್ಲ ತಿರಸ್ಕರಿಸಲಾಗಿದೆ.)

"ಇದರಲ್ಲಿ ಆಶ್ಚರ್ಯವೇನೂ ಇರಲಿಕ್ಕಿಲ್ಲ. ಯಾಕೆಂದರೆ ಸ್ವತಂತ್ರ ಭಾರತದ ಪ್ರಥಮ ಗೃಹಮಂತ್ರಿ ದಿವಂಗತ ಸರದಾರ್ ಪಟೇಲರು ಆರ್. ಎಸ್. ಎಸ್. ಅನ್ನು ಕಾಂಗ್ರೆಸ್‌ನೊಳಗೆ ಸೇರಿಸಿಕೊಳ್ಳಲು ಆರ್. ಎಸ್. ಎಸ್. ನ ನಾಯಕರೊಡನೆ ಮಾತುಕತೆಗಿಳಿದಿದ್ದರು ಎಂಬುದು ಈಗ ಇತಿಹಾಸದ ಅಂಶವಾಗಿದೆ. ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಹಿಂದೂ ಹಾಗೂ ಮುಸ್ಲಿಂ ಕೋಮುವಾದದೊಡನೆ ಅವಕಾಶವಾದಿ ಮೈತ್ರಿಯ ಧೋರಣೆಯನ್ನು ಆಡಳಿತ ಪಕ್ಷ ಮೊದಲಿನಿಂದಲೂ ತಳೆದಿದೆ."

ಅಂದರೆ ಆಡಳಿತ ಕಾಂಗ್ರೆಸ್ ಕಳೆದ 33 ವರ್ಷಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಆರ್. ಎಸ್. ಎಸ್. ವಿರುದ್ಧ ನಿಲುವು ತಳೆದಿದೆ ಎಂಬುದನ್ನು ಇಲ್ಲಿ ನಿರಾಕರಿಸುತ್ತಿಲ್ಲ. ಆದರೆ ಆಗಾಗ ಕೆಲವು ಸಂದರ್ಭಗಳಲ್ಲಿ ಮಾಡಿಕೊಂಡ ಒಪ್ಪಂದಗಳು ಮಾತ್ರವಲ್ಲದೆ ಆಡಳಿತಪಕ್ಷ ಎಂದೂ 'ಹಿಂದೂ ರಾಷ್ಟ್ರ'ದ ಅಪಾಯಕಾರೀ ತತ್ವದ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸಿಯೇ ಇಲ್ಲ. ನಿಜವಾಗಿ ಆರ್. ಎಸ್. ಎಸ್.ಗೆ ಸಂಬಂಧಪಟ್ಟಂತೆ ಕೈಗೊಂಡ ಆಡಳಿತ ಕ್ರಮಗಳು (ಈ ಕ್ರಮಗಳು ಅಂತಿಮವಾಗಿ ತುರ್ತು ಪರಿಸ್ಥಿತಿಯಲ್ಲಿ ಆರ್. ಎಸ್. ಎಸ್. ಮೇಲೆ ನಿರ್ಬಂಧ ಹೇರುವುದರೊಂದಿಗೆ ಪೂರ್ಣಗೊಂಡವು) ಆ ಸಂಸ್ಥೆಯ ಸುತ್ತ ಒಂದು ಪ್ರಭಾವವಲಯವನ್ನು ನಿರ್ಮಿಸಿತಷ್ಟೆ. ಈಗಲೂ ಆಳುವ ಪಕ್ಷದ ಕೆಲವು ನಾಯಕರು ಆ ಸಂಸ್ಥೆಯ ಮೇಲೆ ನಿರ್ಬಂಧ ಹೇರುವ ಅವಶ್ಯಕತೆ ಬಗ್ಗೆ ಮಾತನಾಡುವುದು ಕೇಳಿಬರುತ್ತಿದೆ. ಕಾರ್ಯತಃ ತಾವೇ ಪುನರುತ್ಥಾನವಾದದ ಸಿದ್ಧಾಂತಕ್ಕೆ ಸಹಾಯ ಮಾಡುತ್ತಿದ್ದರೂ ಮತ್ತು ಅದನ್ನು ಬಲಪಡಿಸುತ್ತಿದ್ದರೂ ಇವರು ನಿರ್ಬಂಧದ ಬಗ್ಗೆ ಮಾತಾಡುತ್ತಿದ್ದಾರೆ.

ಒಪ್ಪಂದದ ನಿಲುವು

ಮುಸ್ಲಿಂ ಪುನರುತ್ಥಾನವಾದಕ್ಕೆ ಸಂಬಂಧಪಟ್ಟಂತೆಯೂ ಆಳುವ ಪಕ್ಷ ಒಪ್ಪಂದ ಮನೋಭಾವ ತಳೆದಿದೆ. ಬಹಳ ಸಂಖ್ಯೆಯಲ್ಲಿ ಜನರು ಉರ್ದು ಭಾಷೆ ಮಾತನಾಡುವ ರಾಜ್ಯಗಳಲ್ಲಿ ಉರ್ದುವನ್ನು ಎರಡನೇ ಅಧಿಕೃತ ಭಾಷೆಯನ್ನಾಗಿ ಪರಿಗಣಿಸಬೇಕು ಎಂಬ ನ್ಯಾಯಯುತ ಬೇಡಿಕೆಯನ್ನು ಮನ್ನಿಸಲು ನಿರಾಕರಿಸುವ ಆಡಳಿತ ಪಕ್ಷ ಕೆಲವು ವಿದ್ಯಾಸಂಸ್ಥೆಗಳನ್ನು (ಉದಾ : ಅಲೀಘಡ್ ಮುಸ್ಲಿಂ ವಿಶ್ವವಿದ್ಯಾಲಯ) ಕೋಮಿನ ಸಂಕುಚಿತವಾದಿಗಳ ಸಂಪೂರ್ಣ ನಿಯಂತ್ರಣಕ್ಕೆ ಒಳಪಡಿಸಬೇಕೆಂಬ ಅಸಮಂಜಸವಾದ ಬೇಡಿಕೆಗಳನ್ನು ಮನ್ನಿಸುತ್ತಿದೆ.

ವಿಚಾರಶೀಲರಾದ ಜಾತ್ಯತೀತ ತತ್ವಕ್ಕೆ ಬದ್ಧರಾದ ಎಲ್ಲಾ ಜನರೂ ಸಂಕುಚಿತವಾದದ ವಿರುದ್ಧ ಒಳಗಿಂದಲೇ ಹೋರಾಡುತ್ತಿರುವ ಆ ಕೋಮಿನ ಪ್ರಗತಿಶೀಲರಿಗೆ ಎಲ್ಲಾ ರೀತಿಯ ಸಹಾಯ ಹಾಗೂ ಬೆಂಬಲ ನೀಡುವ ಅಗತ್ಯವನ್ನು ಮನಗಾಣಬೇಕು ಮತ್ತು ಜತೆಗೇ ಉರ್ದು ಭಾಷೆಯ ಪ್ರಶ್ನೆ ಇತ್ಯಾದಿ ಆ ಕೋಮಿನ ನ್ಯಾಯಯುತ ಬೇಡಿಕೆಗಳನ್ನು ಮನ್ನಿಸಬೇಕು. ಆದರೆ ಆಳುವ ಪಕ್ಷ ಮಾಡಿರುವುದು ಇದಕ್ಕೆ ಸರಿಯಾಗಿ ವಿರುದ್ಧವಾದದನ್ನೇ.

ಮೇಲೆ ನಾವು ಆಳುವ ಪಕ್ಷದ ನಿಲುವು ಹಾಗೂ ಧೋರಣೆಗಳನ್ನು ಟೀಕಿಸಿದ್ದೇವೆ. ಜತೆಗೇ ಹಲವು ವಿರೋಧ ಪಕ್ಷಗಳೂ ಇಂತಹ ತಪ್ಪುಗಳನ್ನೇ ಮಾಡಿವೆ ಎಂದೂ ಹೇಳಬೇಕಾಗುತ್ತದೆ. ಆದರೆ ವಿರೋಧ ಪಕ್ಷದಲ್ಲಿರುವುದರಿಂದ ಅವರು ಆಳುವ ಪಕ್ಷದಷ್ಟು ನಷ್ಟವುಂಟುಮಾಡಲಾರವು. ಅಪಾಯಕಾರೀ ಸ್ಥಿತಿಯನ್ನು ಮನಗಂಡು ಅವರು ಎಲ್ಲಾ ರೀತಿಯ-ವಿಶೇಷವಾಗಿ ಹಿಂದೂ, ಜತೆಗೇ ಇಸ್ಲಾಮಿಕ್-ಪುನರುತ್ಥಾನವಾದ ಮತ್ತು ಸಂಕುಚಿತವಾದದ ವಿರುದ್ಧ ಏಕಕಾಲದಲ್ಲಿ ನಡೆಸಬೇಕಾದ ಹೋರಾಟದಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಆಶಿಸುತ್ತೇವೆ.

○

ಅಸ್ಸಾಂ ಸಮಸ್ಯೆಯಲ್ಲಿ ಅಡಕವಾಗಿರುವ ಪ್ರಶ್ನೆಗಳು

-ಇ.ಎಂ.ಎಸ್.

[ಹಿಂದಿನ ಸಂಚಿಕೆಯಿಂದ]

ಮೂಲ ಸಮಸ್ಯೆ ಹಾಗೇ ಉಳಿದುಕೊಂಡಿದೆ

ಇಷ್ಟರಿಂದಲೇ ಮೂಲಸಮಸ್ಯೆ ಬಗೆಹರಿಯುವುದಿಲ್ಲ. ಏಕೆಂದರೆ 1. ಪ್ರತ್ಯೇಕ ರಾಷ್ಟ್ರೀಯತೆಯಾಗಿ ಅಸ್ಸಾಮಿ ಭಾಷೆ ಮಾತನಾಡುವ ಜನರ ಹಕ್ಕುಗಳು ಮತ್ತು ಅಶೋತ್ತರಗಳ ಸ್ವಾಯತ್ತತೆ ಹಾಗೂ 2. ಸಂವಿಧಾನ ನೀಡಿರುವ ಹಕ್ಕುಗಳ ಪ್ರಕಾರ ಅಸ್ಸಾಮಿನಲ್ಲಿ ನೆಲೆಸಿರುವ ಅಸ್ಸಾಮಿ ಭಾಷೆ ಮಾತನಾಡದ ಭಾರತೀಯ ಪ್ರಜೆಗಳ ನ್ಯಾಯಯುತ ಹಕ್ಕುಗಳು-ಇವೆರಡರ ನಡುವೆ ಹೊಂದಾಣಿಕೆಯುಂಟುಮಾಡುವ ಸಮಸ್ಯೆ ಪರಿಹಾರವಾಗದೆ ಉಳಿದಿರುತ್ತದೆ.

ಈ ಎರಡೂ ವಿಭಾಗಗಳ ಜನರ ಬೇಡಿಕೆಗಳ ಹೊಂದಾಣಿಕೆಯುಂಟಾಗಬೇಕಾದರೆ ಸಂಬಂಧಪಟ್ಟ ಎಲ್ಲರೂ ತುಂಬಾ ಉದಾರ ಮನೋಭಾವ ತೋರಿಸಿ ಕೊಡು-ಕೊಳ್ಳುವ ನೀತಿಯನ್ನು ಅನುಸರಿಸಬೇಕಾಗುತ್ತದೆ. ಚಳುವಳಿಯ ಮುಂದಾಳುಗಳು ತಾವು ಸೂಚಿಸಿರುವ ಎರಡು ದಾಖಲೆಗಳಿಗೇ ಬಲವಾಗಿ ಅಂಟಿಕೊಂಡಿರುವುದನ್ನು ನೋಡಿದರೆ ಅವರು ಈ ಕೊಡು-ಕೊಳ್ಳುವ ಮನೋಭಾವವನ್ನು ತೋರಿಸಲು ಸಿದ್ಧರಿಲ್ಲವೆನ್ನುವುದು ಖಚಿತ.

ಕೇಂದ್ರಸರಕಾರದಿಂದಲೂ ಈ ಬಗೆಯ ವರ್ತನೆ ಕಂಡುಬರುತ್ತದೆ. ಅದು ಕೇಂದ್ರ-ರಾಜ್ಯ ಸಂಬಂಧಗಳ ಬಗೆಗಿನ ಮತ್ತು ಭಾರತವನ್ನು ಬಹುರಾಷ್ಟ್ರೀಯ ಪ್ರಜಾಸತ್ತೆಯಾಗಿ ಬಲಪಡಿಸುವುದರಲ್ಲಿ ಬೇರೆಬೇರೆ ಭಾಷಾ ಮತ್ತು ಸಾಂಸ್ಕೃತಿಕ ಗುಂಪುಗಳು ವಹಿಸುವ ಪಾತ್ರದ ಕುರಿತಾದ ತನ್ನ ಹಟಮಾರಿತನದ ವರ್ತನೆಯನ್ನು ಬಿಟ್ಟುಕೊಡಬೇಕು.

ಅಸ್ಸಾಂ ಚಳುವಳಿಯನ್ನು ಅಸ್ಸಾಮಿನಲ್ಲೇ ನಡೆದಿದ್ದ ಅದರ ಸದ್ಯ ತುಸು ತಣ್ಣಗಾಗಿರುವ ಬುಡಕಟ್ಟು ಜನರು ಮತ್ತು ಇತರ ಜನರ ನಡುವಿನ ಘರ್ಷಣೆಗಳನ್ನೂ ಒಳಗೊಂಡಂತೆ ದೇಶದ ಬೇರೆಬೇರೆ ಭಾಗಗಳಲ್ಲಿ ನಡೆಯುತ್ತಿರುವ ಚಳುವಳಿ ಮತ್ತು ಆಂದೋಲನಗಳಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವಿಲ್ಲ. ಈ ಸಮಸ್ಯೆಗೆ ಬರೀ ತೇಪೆ ಹಚ್ಚುವ ಪರಿಹಾರಗಳನ್ನು ಕಂಡುಕೊಂಡರೆ ಉಪಯೋಗವಿಲ್ಲ. ಹಾಗೆ ಮಾಡಿದಲ್ಲಿ ಅಸ್ಸಾಂನಲ್ಲೇ ಏಕೆ-ದೇಶದ ಇನ್ನಿತರ ಭಾಗಗಳಲ್ಲೂ ಇಂತಹದೇ ಚಳುವಳಿ ಭುಗಿಲೇಳಬಹುದು. ಈಶಾನ್ಯ ಪ್ರದೇಶದ ರಾಜ್ಯಗಳಲ್ಲೂ ಹಾಗೂ ಬುಡಕಟ್ಟು ಜನಾಂಗದವರು ಅಧಿಕವಾಗಿರುವ ಇತರ ರಾಜ್ಯಗಳಲ್ಲೂ ಇಂದು ನಡೆಯುತ್ತಿರುವ ಘಟನೆಗಳಿಂದ ಕೇಂದ್ರಸರಕಾರವು ಈ ಪಾಠವನ್ನು ಕಲಿತುಕೊಳ್ಳಬೇಕು.

ಎರಡು ವಿಭಿನ್ನ ಮಾರ್ಗಗಳು

ಇಲ್ಲಿಗಮನಿಸಬೇಕಾದ ಇನ್ನೂ ಒಂದು ವಿಚಾರವಿದೆ. ಕೇಂದ್ರ ರಾಜ್ಯ ಸಂಬಂಧ ಮತ್ತು ಬುಡಕಟ್ಟು ಜನಾಂಗದವರ ಸಮಸ್ಯೆಗಳನ್ನು ಎದುರಿಸಲು ಎರಡು ವಿಭಿನ್ನ ಮಾರ್ಗಗಳಿವೆ. ಮೊದಲನೆಯದು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷ ಮತ್ತು ಬಂಡವಾಳಶಾಹಿ ಭೂಮಾಲಕ ವರ್ಗಗಳನ್ನು ಪ್ರತಿನಿಧಿಸುವ ಇನ್ನಿತರ ಪಕ್ಷಗಳು ಅನುಸರಿಸುತ್ತಿರುವ ಮಾರ್ಗ ಮತ್ತು ಎರಡನೆಯದು ದೇಶದ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ಅನುಸರಿಸುತ್ತಿರುವ ದಾರಿ.

ಮೊದಲನೆಯದು ಎಲ್ಲ ಆಡಳಿತ ಅಧಿಕಾರವನ್ನೂ, ಆರ್ಥಿಕ ಮೂಲಗಳನ್ನೂ ನವದೆಹಲಿಯಲ್ಲಿ ಕೇಂದ್ರೀಕರಿಸಿಕೊಳ್ಳುವ ಮೂಲಕವೇ ದೇಶದ ಒಗ್ಗಟ್ಟನ್ನು ಉಳಿಸಿಕೊಳ್ಳಲೂ ಬಲಪಡಿಸಲೂ ಸಾಧ್ಯ ಅನ್ನುತ್ತದೆ; ವಿಕೇಂದ್ರೀಕರಣಕ್ಕಾಗಿ ಮುಂದೊಡ್ಡುವ ಪ್ರತಿಯೊಂದು ಬೇಡಿಕೆಯೂ ದೇಶದ ಐಕ್ಯಕ್ಕೆ ಹಾನಿಕರವೆಂದು ಈ ಮಾರ್ಗದ ಅನುಯಾಯಿಗಳು ಹೇಳುತ್ತಿದ್ದಾರೆ. ಕಾಂಗ್ರೆಸ್ (ಐ) ಮತ್ತು ಅದರ ನೇತೃತ್ವದಲ್ಲಿರುವ ಕೇಂದ್ರಸರಕಾರ ಇವೆರಡೂ ಇದೇ ಮಾರ್ಗವನ್ನನುಸರಿಸುತ್ತಿವೆ. ರಾಜ್ಯಗಳ ಆರ್ಥಿಕ ಅಧಿಕಾರವನ್ನು ಇನ್ನಷ್ಟು ಮೊಟಕುಗೊಳಿಸಲು ಇವು ಒತ್ತಾಯಿಸುತ್ತಿರುವುದೇ ಇದಕ್ಕೆ ನಿದರ್ಶನ. ಕೇಂದ್ರದ ಈ ಕ್ರಮವನ್ನು ಕಾಂಗ್ರೆಸ್ (ಐ) ಪಕ್ಷ ರಾಜ್ಯಭಾರ ಮಾಡುತ್ತಿರುವ ಹಲವಾರು ರಾಜ್ಯಸರಕಾರಗಳೂ ವಿರೋಧಿಸುತ್ತಿವೆಯೆಂದಮೇಲೆ ಆಳುವ ಪಕ್ಷ ಎಂತಹ ದುಸ್ಸಾಹಸಕ್ಕೆ ಇಳಿದಿದೆ ಮತ್ತು ಅದರ ಪರಿಣಾಮವೇನಾದೀತು ಎನ್ನುವುದೂ ಅರ್ಥವಾದೀತು.

ಇದಕ್ಕೆ ಪ್ರತಿಯಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಹೆಚ್ಚಿನ ವಿಕೇಂದ್ರೀಕರಣಕ್ಕಾಗಿ ಒತ್ತಾಯಿಸುತ್ತಿವೆ. ಇದೇ ಬೇಡಿಕೆಯನ್ನು ತಮಿಳುನಾಡಿನ ಡಿ. ಎಂ. ಕೆ. ಮತ್ತು ಎ. ಐ. ಡಿ. ಎಂ. ಕೆ., ಪಂಜಾಬಿನ ಅಕಾಲಿದಳ, ಜಮ್ಮು ಕಾಶ್ಮೀರದ ರಾಷ್ಟ್ರೀಯ ಕಾನ್ಫರೆನ್ಸ್ ಮತ್ತು ಇದೀಗ ಗಲಭೆ ಪೀಡಿತವಾಗಿರುವ ಈಶಾನ್ಯ ಪ್ರದೇಶವನ್ನೂ ಒಳಗೊಂಡಂತೆ ಬೇರೆ ಕಡೆ ಇರುವ ಹಲವು ಪ್ರಾದೇಶಿಕ ಪಕ್ಷಗಳೂ ಮುಂದೊಡ್ಡುತ್ತಿವೆ.

ಇದರೊಂದಿಗೆ ಸಿ. ಪಿ. ಐ. (ಎಂ) ಮತ್ತಿತರ ಎಡಪಕ್ಷಗಳು ಬುಡಕಟ್ಟು ಜನಾಂಗದವರು ಗಣನೀಯ ಸಂಖ್ಯೆಯಲ್ಲಿರುವ ಪ್ರದೇಶಗಳಿಗೆ ಆಯಾ ರಾಜ್ಯಗಳ ಚೌಕಟ್ಟಿನೊಳಗೇ ಪ್ರಾದೇಶಿಕ ಸ್ವಾಯತ್ತತೆಯನ್ನು ನೀಡಬೇಕೆಂದು ಮುಂದೊಡ್ಡಿರುವ ಬೇಡಿಕೆಯನ್ನೂ ಸೇರಿಸಿಕೊಳ್ಳಬೇಕು. ಇದು ಬರಿಯ ಬಾಯುಪ್ರಚಾರದ ಬೇಡಿಕೆ

(6ನೇ ಪುಟ ನೋಡಿ)

ಎಲ್ಲಾ ವಿಧದ ಪುನರುತ್ಥಾನವಾದ ಮತ್ತು ಸಂಕುಚಿತವಾದದ ವಿರುದ್ಧ ಹೋರಾಡಬೇಕಾಗಿದೆ

ಮುರಾದಾಬಾದಿನಲ್ಲಿ ಅರ್ಧಲಕ್ಷಕ್ಕಿಂತಲೂ ಹೆಚ್ಚು ಮುಸ್ಲಿಮರು ಮತ್ತು ಪೋಲೀಸರ ನಡುವೆ ಈದ್‌ದಿನದ ತಿಕ್ಕಾಟ ನಡೆದು ಒಂದು ತಿಂಗಳಾಯಿತು. ಈ ಘರ್ಷಣೆಯ ತಕ್ಷಣದ ಕಾರಣವಾದ ಮಸೀದಿಯೊಳಗೆ ಒಂದು ಹಂದಿಯ ಪ್ರವೇಶದ ಘಟನೆ ಮತ್ತು ಆ ಮೇಲಿನ ಘಟನಾವಳಿ ಈ ತಿಕ್ಕಾಟಕ್ಕೆ ಮುರಾದಾಬಾದ್ ಮತ್ತು ಉತ್ತರಪ್ರದೇಶದ ಇತರ ಕೆಲವು ಪಟ್ಟಣಗಳಲ್ಲಿ ಮತೀಯ ಗಲಭೆಯ ರೂಪಕೊಟ್ಟಿತು.

ಮುರಾದಾಬಾದಿನ ಆ ದುರದೃಷ್ಟಕರ ಈದ್‌ದಿನದ ನಂತರ ಪ್ರತಿದಿನ ಪತ್ರಿಕೆಗಳಲ್ಲಿ ಭಯ, ಗಲಭೆ, ಕೊಲೆ, ಸುಲಿಗೆ, ಅಗ್ನಿಸ್ಪರ್ಶ ಇತ್ಯಾದಿಗಳ ವರದಿ ಬರುತ್ತಲೇ ಇವೆ. ಇದಕ್ಕೆ ಬಲಿಯಾಗಿರುವವರು ಹೆಚ್ಚಾಗಿ ಅಲ್ಪಸಂಖ್ಯಾತ ಕೋಮಿನ ಸದಸ್ಯರು. ಮುರಾದಾಬಾದಿನ ಗಲಭೆ ಪೀಡಿತ ಪ್ರದೇಶಗಳಿಂದ ಪ್ರಾದೇಶಿಕ ಸಶಸ್ತ್ರ ಪಡೆ (P A C) ಯನ್ನು ವಾಪಾಸು ಪಡೆಯಬೇಕೆಂದು ಅಲ್ಪಸಂಖ್ಯಾತ ಕೋಮಿನಿಂದ ಮಾತ್ರವಲ್ಲ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳಿಂದಲೂ ಬಲವಾದ ಬೇಡಿಕೆಗಳು ಬಂದಿವೆ. ಇಷ್ಟೇ ಬಲಯುತವಾಗಿ ಇದಕ್ಕೆ ವಿರುದ್ಧವಾದ ಬೇಡಿಕೆಗಳೂ ಕೇಳಿಬಂದಿವೆ. ಉದಾಹರಣೆಗೆ, ಆರ್. ಎಸ್. ಎಸ್.ನ ಅಧಿಕೃತ ಮುಖವಾಣಿಯಾದ 'ಆರ್ಗನೈಸರ್' PACಯನ್ನು ಅದು ಸಲ್ಲಿಸಿದ 'ಸೇವೆ' ಗಳಿಗಾಗಿ ಪುರಸ್ಕರಿಸಬೇಕು ಎಂದು ಕೇಳಿದೆ. ಈ ರೀತಿ PAC ಈಗ ಒಂದೆಡೆ ಅಲ್ಪಸಂಖ್ಯಾತ ಕೋಮು ಮತ್ತು ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳು ಹಾಗೂ ಇನ್ನೊಂದೆಡೆ ಹಿಂದೂ ಪುನರುತ್ಥಾನವಾದದ ವಕ್ತಾರರ ನಡುವಿನ ತಿಕ್ಕಾಟದ ವಸ್ತುವಾಗಿದೆ.

ಬಗೆಹರಿಯದ ಸಮಸ್ಯೆಗಳು

ಆಳುವ ಕಾಂಗ್ರೆಸ್ (ಐ)ನ ನಾಯಕರು (ಕೇಂದ್ರ ಹಾಗೂ ರಾಜ್ಯ ಎರಡೂ ಕಡೆ) ಮುರಾದಾಬಾದ್ ಹಾಗೂ ಇತರ ಪಟ್ಟಣಗಳಲ್ಲಿ ನಡೆದ ಗಲಭೆಗಳಿಗೆ ಕಾರಣ "ವಿರೋಧ ಪಕ್ಷಗಳ ಸಂಚು" ಎಂದೋ "ವಿದೇಶೀ ಶಕ್ತಿಗಳ ಕೈವಾಡ". ಎಂದೋ, "ಜನತಾ ಮತ್ತು ಲೋಕದಳ ಪಕ್ಷಗಳ ಆಡಳಿತಕಾಲದಲ್ಲಿ ಪಿ ಎ ಸಿ ಯೊಳಗೆ ಅನಪೇಕ್ಷಣೀಯ ಶಕ್ತಿಗಳ ಸೇರ್ಪಡೆ" ಯೆಂದೋ ಮುಂತಾಗಿ ದೂರುತ್ತಿದ್ದಾರೆ.

ಈ ಸಮಸ್ಯೆಗೆ ಅವರು ಸೂಚಿಸುವ ಪರಿಹಾರವೆಂದರೆ ರಾಷ್ಟ್ರೀಯ ಐಕ್ಯತಾ ಸಮಿತಿ (National Integration Council) ಯನ್ನು ಮತ್ತೆ ಚುರುಕುಗೊಳಿಸುವುದು; ಜತೆಗೇ ಕೆಲವು ಆಡಳಿತ ಕ್ರಮಗಳನ್ನು ಕೈಗೊಳ್ಳುವುದು. ಆಡಳಿತ ಕ್ರಮಗಳೆಂದರೆ ಪೋಲೀಸ್ ಸಂಘಟನೆಯನ್ನು ಬಲಪಡಿಸುವುದು, ವಿಶೇಷವಾಗಿ ಬೇಹುಗಾರಿಕೆ ಪಡೆಯನ್ನು ಬಲಪಡಿಸುವುದು, ಪೋಲೀಸ್ ಇಲಾಖೆಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಕೋಮು, ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗ ಹಾಗೂ ಇತರ ಹಿಂದುಳಿದ ಕೋಮುಗಳ ಸದಸ್ಯರನ್ನು ಭರ್ತಿಗೊಳಿಸುವುದು, ಇವಲ್ಲದೆ, ಈ ಆಡಳಿತ ಕ್ರಮಗಳಲ್ಲಿ ಜನಸಾಮಾನ್ಯರ ನಾಗರಿಕ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮತ್ತಷ್ಟು ಮೊಟಕುಗೊಳಿಸುವ ಕ್ರಮವಂತೂ ಸೇರಿಯೇ ಇರುತ್ತದೆ. ಯಾಕೆಂದರೆ ಅವರ ಪ್ರಕಾರ ಕೋಮುವಾದಿ ಶಕ್ತಿಗಳು ದ್ವೇಷ ಪ್ರಚೋದನೆಗೆ ಮತ್ತು ಗಲಭೆಗಳನ್ನು ನಡೆಸುವುದಕ್ಕೆ ಈ ಹಕ್ಕುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

ದಿನೇ ದಿನೇ ಹೆಚ್ಚೆಚ್ಚು ಅಪಾಯಕಾರೀ ಮಟ್ಟ ತಲುಪುತ್ತಿರುವ ಸಮಸ್ಯೆಯ ಬಗ್ಗೆ ಈ ರೀತಿಯ ನಿಲುವು ನಿಜವಾಗಿಯೂ, ಸೌಮ್ಯ ಮಾತುಗಳಲ್ಲಿ ಹೇಳಬೇಕೆಂದರೆ, ಸಂತೃಪ್ತ ಮನೋಭಾವನೆಯ ಪರಮಾವಧಿ. ಮೇಲೆ ತಿಳಿಸಿದ ಕಾರಣಗಳು ಮತ್ತು ಸೂಚಿಸಿದ ಪರಿಹಾರಗಳ ವಿವರಣೆ ಸಮಸ್ಯೆಯ ಮೇಲ್ಪದರವನ್ನಷ್ಟೇ ತಲುಪುತ್ತದೆ.

ಹೊರಗಿನ ಸಾಮ್ರಾಜ್ಯಶಾಹೀ ಶಕ್ತಿಗಳು ಹಾಗೂ ಒಳಗೆ ಅವರ ಏಜಂಟರು ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ಇದು ಇತ್ತೀಚೆಗೆ ಗಂಭೀರವಾಗುತ್ತಿರುವ ಕೋಮು ಪರಿಸ್ಥಿತಿಯ ಮಟ್ಟಿಗೆ ಮಾತ್ರವಲ್ಲ ಅಸ್ಸಾಂ ಮತ್ತು ಈಶಾನ್ಯ ಪ್ರದೇಶದ ಇತರೆಡೆಗಳಲ್ಲಿನ ಪರಿಸ್ಥಿತಿಯ ಬಗ್ಗೆಯೂ ಅಷ್ಟೇ ಸತ್ಯ. ಆದರೆ ಕೋಮು ಗಲಭೆಗಳಿಗೆ ಅಥವಾ ಅಸ್ಸಾಂ ಮತ್ತು ಇತರ ಕಡೆಗಳಲ್ಲಿನ ಪ್ರತ್ಯೇಕತಾ ಚಳವಳಿಗಳಿಗೆ ಇದೇ ಮೂಲ ಅಥವಾ ಮುಖ್ಯ ಕಾರಣವೆಂದರೆ ಅದು ವಾಸ್ತವ ಸಂಗತಿಗಳ ಬಗ್ಗೆ ಕುರುಡಾದಂತೆ.

ಸ್ವಾತಂತ್ರ್ಯ ನಂತರದ ಮೂವತ್ತು ಮೂರು ವರ್ಷಗಳಲ್ಲಿ ಉತ್ತರ ಭಾರತದ ಕೋಮು ಸಮಸ್ಯೆ ಮತ್ತು ದೇಶದ ಈಶಾನ್ಯ ಭಾಗದ ವಿವಿಧ ಭಾಷಾ–ಸಾಂಸ್ಕೃತಿಕ ಗುಂಪುಗಳ ಸಮಸ್ಯೆ ಪರಿಹಾರವಾಗದೇ ಉಳಿದಿರುವುದರಿಂದಲೇ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಅವರ ಸ್ಥಳೀಯ ಏಜಂಟರು ಇಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ. ಆದ್ದರಿಂದ ಪರಿಸ್ಥಿತಿ ಈಗಿನ ಹಂತ ತಲುಪುವುದಕ್ಕೆ ಭಾರತ ಸ್ವತಂತ್ರವಾದಂದಿನಿಂದ ಸತತವಾಗಿ ಮೂವತ್ತು ವರ್ಷಗಳ ಕಾಲ ಆಡಳಿತ ನಡೆಸಿದ, ಮಧ್ಯೆ ಮೂರು ವರ್ಷಗಳ ವಿರಾಮದ ನಂತರ ಮತ್ತೆ ಅಧಿಕಾರಕ್ಕೆ ಬಂದ ಪಕ್ಷವೇ ಹೊಣೆಯಾಗಬೇಕು.

ಸರಕಾರದ ಧೋರಣೆಗಳು ಕಾರಣ

ಕೆಲವು ವಿರೋಧೀ ಪಕ್ಷಗಳು ಮತ್ತು 'ರಾಜಕೀಯೇತರ' 'ಸಾಂಸ್ಕೃತಿಕ' ಎಂದು ಹೇಳಿಕೊಳ್ಳುವ ಸಂಸ್ಥೆಗಳೂ ವಿವಿಧ ಜಾತಿಗಳು, ಧಾರ್ಮಿಕ ಸಮುದಾಯಗಳು, ಭಾಷಾ-ಸಾಂಸ್ಕೃತಿಕ ಗುಂಪುಗಳು ಇತ್ಯಾದಿಗಳ ನಡುವಿನ ವೈಷಮ್ಯವನ್ನು ತೀವ್ರಗೊಳಿಸುವಲ್ಲಿ ತಮ್ಮ ಪಾತ್ರವಹಿಸಿರಬಹುದು. ಆದರೆ ಇಲ್ಲಿ ಕೂಡ ಕಳೆದ 33 ವರ್ಷಗಳಲ್ಲಿ ಸರಕಾರ (ಅಥವಾ ಸರಕಾರಗಳು) ತಳೆದ ಧೋರಣೆಗಳ ಫಲವಾಗಿಯೇ ಇಂತಹ ಪರಿಸ್ಥಿತಿ ಉಂಟಾಗಿದೆ ಎನ್ನುವುದನ್ನು ಮರೆತುಬಿಡುವುದು ಆಡಳಿತ ಪಕ್ಷದ ಬೇಜವಾಬ್ದಾರಿತನದ ಪರಮಾವಧಿಯಾಗುತ್ತದೆ. ಕೇಂದ್ರದಲ್ಲಿ 33 ವರ್ಷಗಳ ಕಾಲ (ಅವಧಿ ದೊಡ್ಡದಾಗಿರಬಹುದು

ಇ. ಎಂ. ಎಸ್.

ಅಥವಾ ಸಣ್ಣದಾಗಿರಬಹುದು) ಅಧಿಕಾರದಲ್ಲಿದ್ದವರು ಈ ಪರಿಸ್ಥಿತಿಯ ಹೊಣೆ ಜಾರಿಸಿ ಕೈತೊಳೆದುಕೊಳ್ಳಲು ಸಾಧ್ಯವಿಲ್ಲ. ಅದರಲ್ಲೂ ದೇಶದಲ್ಲಿ ಸರಕಾರದ ಧೋರಣೆಗಳನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರವಹಿಸಿದ ಪ್ರಸಕ್ತ ಆಡಳಿತ ಪಕ್ಷಕ್ಕಂತೂ ಈ ರೀತಿ ತನ್ನ ಹೊಣೆ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ.

ಕೋಮು ಗಲಭೆಯ ವಿಷಯಕ್ಕೇ ಬಂದರೆ, ಒಂದು ಮಾತು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಬ್ರಿಟಿಷರು ಭಾರತದ ಆಡಳಿತವನ್ನು ಬಿಟ್ಟುಕೊಡುವಾಗ ಮತ್ತು ಅದಕ್ಕೂ ಮೊದಲು ಹಿಂದೂ ಮತ್ತು ಸಿಖ್ಖರು ಒಂದೆಡೆ ಮತ್ತು ಇನ್ನೊಂದು ಕಡೆ ಮುಸ್ಲಿಮರು ಇವರ ನಡುವೆ ನಡೆದ ಘರ್ಷಣೆಗಳ ಕಹಿನೆನಪಿನೊಂದಿಗೇ ಸ್ವತಂತ್ರ ಭಾರತ ಹುಟ್ಟಿತು. ಪಾಕಿಸ್ತಾನದಿಂದ ಭಾರತಕ್ಕೆ ಬಂದ ಹಿಂದೂ ನಿರಾಶ್ರಿತರಲ್ಲಿ, ಭಾರತದಿಂದ ಪಾಕಿಸ್ತಾನಕ್ಕೆ ಹೋದ ಮುಸ್ಲಿಂ ನಿರಾಶ್ರಿತರಲ್ಲಿ ಮಿಲಿಯಗಟ್ಟಲೆ ಜನ ತಮ್ಮ ಮನೆ-ಮಠ ಕಳಕೊಂಡರು; ಲಕ್ಷಗಟ್ಟಲೆ ಜನ ಕಗ್ಗೊಲೆಯಾದರು; ಹೆಚ್ಚಿನವರು ತಮ್ಮ ಎಲ್ಲಾ ಆಸ್ತಿ-ಪಾಸ್ತಿ ಕಳಕೊಂಡರು. ಅದುವರೆಗೆ ಒಂದೇ ಆಗಿದ್ದ ದೇಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಇಷ್ಟೊಂದು ಅಗಾಧ ಪ್ರಮಾಣದ ಸ್ಥಳಾಂತರದಿಂದಾಗಿ ಉಂಟಾದ ಗೊಂದಲದ ಕಹಿಗಡಿಯು ಎರಡೂ ಕಡೆ ಮಿಲಿಯಗಟ್ಟಲೆ ಜನರ ಮನಸ್ಸನ್ನು ಪ್ರಭಾವಿತಗೊಳಿಸುತ್ತಾ ಇದೆ. ಈ ಕಹಿ ನೆನಪುಗಳಿಂದಾಗಿ ಹರಡಿದ್ದ ಕಹಿ ಭಾವನೆಗಳಿಗೆ ಮೂರ್ತ ರೂಪ ಕೊಡಲು ಪ್ರಯತ್ನಿಸುತ್ತಿದ್ದ ಸಂಘಟನೆಗಳಿಗೂ ಪಕ್ಷಗಳಿಗೂ ಆಗ ಕೊರತೆಯಿರಲಿಲ್ಲ.

ಈ ಹಿನ್ನೆಲೆಯಲ್ಲಿಯೇ ಭಾರತದಲ್ಲಿ ಆರ್.ಎಸ್.ಎಸ್., ಪಾಕಿಸ್ತಾನದಲ್ಲಿರುವ ಜಮಾತ್-ಎ-ಇಸ್ಲಾಮಿ ಮುಂತಾದ ಸಂಘಟನೆಗಳನ್ನು ಪರಿಶೀಲಿಸಬೇಕು. ಆರ್.ಎಸ್.ಎಸ್, ತನ್ನ 'ಹಿಂದೂ ರಾಷ್ಟ್ರ'ದ ತತ್ವದ ಮೂಲಕ ಮತ್ತು ಜಮಾತ್-ಎ-ಇಸ್ಲಾಮಿ ಹಳೆಯ 'ದ್ವಿರಾಷ್ಟ್ರ ಸಿದ್ಧಾಂತ'ದ ಹೊಸ ರೂಪದ ಮೂಲಕ ಈ ಎರಡು ಧಾರ್ಮಿಕ ಸಮುದಾಯಗಳು (ಹಿಂದೂ ಮತ್ತು ಮುಸ್ಲಿಂ) ಪರಸ್ಪರ ವಿರೋಧೀ ಬಣಗಳಲ್ಲೇ ಮುಂದುವರಿಯುವಂತೆ ಸಾಕಷ್ಟು ಕೆಲಸ ಮಾಡಿವೆ. ಎರಡು ಧಾರ್ಮಿಕ ಕೋಮುಗಳ ನಡುವಿನ ಈ ವಿಭಜನೆಯೇ ಕಳೆದ ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ದೇಶದ ವಿವಿಧ ಭಾಗಗಳಲ್ಲಿ ನಡೆದ ಕೋಮು ಗಲಭೆಗಳಿಗೆ ಮೂಲವಾಗಿದೆ.

ಅಪಾಯಕಾರೀ ಪಾತ್ರ

ಈ ಎರಡರಲ್ಲಿ 'ಹಿಂದೂರಾಷ್ಟ್ರ'ದ ಸಿದ್ಧಾಂತ ಮತ್ತು ಅದನ್ನು ಮಂಡಿಸಿದ ಆರ್.ಎಸ್.ಎಸ್. ಭಾರತದ ವಾಸ್ತವ ಸ್ಥಿತಿಯಲ್ಲಿ ಹೆಚ್ಚು ಅಪಾಯಕಾರಿಯಾದ ಪಾತ್ರ ವಹಿಸುತ್ತಿವೆ ಎಂಬುದು ನಿಜ. ಕೋಮುಗಲಭೆಗಳ ವರದಿಯನ್ನು ಗಮನಿಸಿದರೆ ಇದು ತಿಳಿಯುತ್ತದೆ. ಯಾಕೆಂದರೆ ಕೆಲವೊಂದು ಪ್ರದೇಶಗಳನ್ನು ಬಿಟ್ಟರೆ ಹಿಂದೂಗಳು ಒಟ್ಟಾರೆ ದೇಶದಲ್ಲಿ ಬಹುಸಂಖ್ಯೆಯಲ್ಲಿದ್ದಾರೆ. ಆರ್.ಎಸ್.ಎಸ್. 'ಶಾಖೆ'ಗಳ ಮೂಲಕ ಹೊಸ ಪೀಳಿಗೆಯವರ ಮನಸ್ಸಿನಲ್ಲಿ ವಿಷಬೀಜ ಬಿತ್ತುವುದು, ಅವರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುವುದು, ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಲು ಶಸ್ತ್ರಗಳನ್ನು ಸರಬರಾಜು ಮಾಡುವುದು ಇತ್ಯಾದಿ ಕೆಲಸಗಳನ್ನು ದೇಶದ್ಯಾಂತ ಸಂಘಟಿತವಾಗಿ ನಡೆಸುವುದರಿಂದ ದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ಎಡೆಬಿಡದ ದಾಳಿಗಳಿಗೆ ಅವಕಾಶ ಕೊಡುವ ಪರಿಸ್ಥಿತಿ ಉಂಟಾಗುತ್ತದೆ. ಈ ರೀತಿಯ ವಾತಾವರಣ ರೂಪುಗೊಂಡಿದೆ ಕೂಡಾ. ಕಳೆದ ಮೂರು ದಶಕಗಳಿಗೂ ಮೀರಿದ ಸಮಯದಲ್ಲಿ ನಡೆದಿರುವುದೂ ಇದೇ.

ಈ ರೀತಿ 'ಹಿಂದೂರಾಷ್ಟ್ರ' ಸಿದ್ಧಾಂತ ಮತ್ತು ಅದರ ಮೂರ್ತ ರೂಪವಾದ ಸಂಘಟನೆಯು ಮೇಲೆ ಹರಿಸಲಾದ ಬಾಣ ಪ್ರಯೋಗ ಮಾಡುತ್ತಿರುವಂತೆಯೇ ಇನ್ನೊಂದು ಕಡೆ ಮುಸ್ಲಿಂ ಪುನರುತ್ಥಾನವಾದ ವಹಿಸಿದ ಅಪಾಯಕಾರಿ ಪಾತ್ರದ ಬಗ್ಗೆ ಯಾರೂ ಕುರುಡಾಗಲು ಸಾಧ್ಯವಿಲ್ಲ. ಇದರಿಂದಾಗಿಯೇ ತಾನೇ 'ದ್ವಿರಾಷ್ಟ್ರ ಸಿದ್ಧಾಂತ' ಹುಟ್ಟಿ, ಬೆಳೆದು ಅಂತಿಮವಾಗಿ ಭಾರತಸಂಘ ಮತ್ತು ಪಾಕಿಸ್ತಾನ ಎಂಬ ಎರಡು ಪರಸ್ಪರ ಕಾದಾಡುವ ಪ್ರಭುತ್ವಗಳು ಹುಟ್ಟಿಕೊಂಡದ್ದು? ಭಾರತದ ಸುತ್ತಮುತ್ತಲಿರುವ ಹಲವು ದೇಶಗಳಲ್ಲಿ ಹರಡಿರುವ ಇಸ್ಲಾಮಿಕ್ ಕ್ರಾಂತಿಯ ತತ್ವದಿಂದಾಗಿ ಇದಕ್ಕೆ ಈಗ ಮತ್ತೆ ಹೊಸಜೀವ ಬಂದಂತಾಗಿದೆ.

ಈ ಸಂದರ್ಭದಲ್ಲೇ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಅಂತರಾಷ್ಟ್ರೀಯ ಇಸ್ಲಾಮಿಕ್ ವಿದ್ಯಾರ್ಥಿಗಳ ಸಮ್ಮೇಳನಕ್ಕೆ ನಡೆಸಿದ ತಯಾರಿ ಮತ್ತು ಆ ಸಮ್ಮೇಳನದ ಕರ್ತೃಗಳು ಭಾರತದಲ್ಲಿ 'ಇರಾನಿ ಮಾದರಿ ಕ್ರಾಂತಿ' ನಡೆಸುತ್ತೇವೆ ಎಂದು ಮಾಡಿದ ಘೋಷಣೆಯ ಅಪಾಯಕಾರೀ ಪರಿಣಾಮಗಳನ್ನು ಕಡೆಗಣಿಸಲಾಗದು. ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸರ್ಕಾರ ಕೈಗೊಂಡ ದಿಟ್ಟ ಕ್ರಮಗಳಿಂದಾಗಿ ಈ ಸಮ್ಮೇಳನ ನಡೆಯದೇ ಹೋದರೂ ಅಲ್ಲಿ ಅದಕ್ಕಿಂತ ಕೆಲವು ದಿನಗಳ ಮೊದಲು ಒಂದು ಇಸ್ಲಾಮಿಕ್ ಸಮ್ಮೇಳನ ನಡೆಯಿತೆನ್ನುವುದನ್ನು ಇಲ್ಲಿ ತಿಳಿಸಬಹುದು. ಈ ಸಮ್ಮೇಳನಕ್ಕೆ ವಿವಿಧ ದೇಶಗಳ ಹಲವು ಪ್ರತಿನಿಧಿಗಳು ಬಂದಿದ್ದರು. ಇದರಲ್ಲಿ ಭಾಗವಹಿಸಿದವರಲ್ಲಿ ಮಕ್ಕಾದಲ್ಲಿರುವ ಮುಖ್ಯ ಮಸೀದಿಯ ಇಮಾಂ ಕೂಡಾ ಒಬ್ಬರು. ಮತ್ತು

ಶೋಷಣಾರಹಿತ ಸಮಾಜಕ್ಕಾಗಿ ಹೋರಾಡಲು ವಿದ್ಯಾರ್ಥಿಗಳಿಗೆ ಕರೆ

ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಕರ್ನಾಟಕ ಪಾಲಿಟೆಕ್ನಿಕ್ ಮತ್ತು ಮಹಿಳಾ ಪಾಲಿಟೆಕ್ನಿಕ್‌ನ ಜಂಟಿ ಘಟಕದ ಉದ್ಘಾಟನಾ ಸಮಾರಂಭವು ದಿನಾಂಕ 27-9-80ರಂದು ಮಂಗಳೂರಿನ ಕೇಂದ್ರ ಸಹಕಾರಿ ಬ್ಯಾಂಕಿನ ಸಭಾಂಗಣದಲ್ಲಿ ಜರುಗಿತು. ಮಂಗಳೂರಿನ "ಸಮಾಜ ವಿಜ್ಞಾನ ವೇದಿಕೆ"ಯ ಅಧ್ಯಕ್ಷ ಕಾಂ. ಬಿ. ಮಾಧವ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ತಾಂತ್ರಿಕ ತಜ್ಞ ಡಾ. ಹೆನ್ರಿಯವರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ, ತಾಂತ್ರಿಕತೆಯನ್ನು ಬೆಳೆಸುವುದರಲ್ಲಿ ನಮ್ಮ ಆಳುವ ವರ್ಗಗಳು ತೋರುತ್ತಿರುವ ಅಸಡ್ಡೆ ನೀತಿಯನ್ನು ಎತ್ತಿ ತೋರಿಸಿದರು. "ಅಪಾರ ಖನಿಜ ಸಂಪತ್ತಿರುವ ಭಾರತದಲ್ಲಿ ಈ ಸಂಪನ್ಮೂಲಗಳನ್ನು ಸರಿಯಾಗಿ ಉಪಯೋಗಿಸುತ್ತಿದ್ದಲ್ಲಿ ತಾಂತ್ರಿಕತೆ, ಕೈಗಾರಿಕೆ ಮತ್ತು ಇತರ ಕ್ಷೇತ್ರಗಳಲ್ಲಿ ಹೆಚ್ಚಿನ ಅಭಿವೃದ್ಧಿ ಪಡೆಯಲು ಸಾಧ್ಯವಿತ್ತು. ಆದರೆ ನಮ್ಮ ಸಂಪನ್ಮೂಲಗಳು ಪೋಲಾಗುತ್ತಿವೆ. ವಿಜ್ಞಾನಿಗಳೂ, ತಾಂತ್ರಿಕಜ್ಞರೂ ಹೊಟ್ಟೆಪಾಡಿಗಾಗಿ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ತಾಂತ್ರಿಕ ಕ್ಷೇತ್ರಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಲ್ಲಿ ಸರಕಾರ ವಿಫಲಗೊಂಡಿದ್ದು ದುರದೃಷ್ಟಕರ" ಎಂದು ಡಾ. ಹೆನ್ರಿ ತಿಳಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಣಿಪಾಲದ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರೂ, ಸರ್ಜರಿ ವಿಭಾಗದ ಮುಖ್ಯಸ್ಥರೂ ಆಗಿರುವ ಡಾ. ಪಿ. ಕೆ. ಆರ್. ವಾರಿಯರ್ ಮಾತನಾಡುತ್ತಾ ಭಾರತದಲ್ಲಿ ವಿದ್ಯಾರ್ಥಿಗಳ ಸಂಘಟನೆ ಮತ್ತು ಚಳುವಳಿ ನಡೆದು ಬಂದ ದಾರಿಯನ್ನು ವಿವರಿಸುತ್ತಾ ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯರಲ್ಲಿ ಜಾಗೃತಿ ಹುಟ್ಟಿಸುವಲ್ಲಿ ವಿದ್ಯಾರ್ಥಿ ಫೆಡರೇಷನ್ ವಹಿಸಿದ ಪಾತ್ರವನ್ನು ವಿವರಿಸಿದರು. "ದೇಶಕ್ಕೆ ಸ್ವಾತಂತ್ರ್ಯ ಬಂದು 33 ವರ್ಷಗಳಾದರೂ, 33 ಕೋಟಿಗಿಂತಲೂ ಅಧಿಕ ಜನತೆ ಒಪ್ಪತ್ತಿನ ಗಂಜಿಗೂ ಗತಿ ಇಲ್ಲದೇ ಬದುಕುತ್ತಿದ್ದಾರೆ. ರಾಜಕೀಯ ಸ್ವಾತಂತ್ರ್ಯ ಮಾತ್ರ ಬಂದಿದೆ. ಆದರೆ ಆರ್ಥಿಕ ಸ್ವಾತಂತ್ರ್ಯ ನಮಗಿನ್ನೂ ಬಂದಿಲ್ಲ. ದೇಶದ ಜನಸಾಮಾನ್ಯರು ಅದಕ್ಕಾಗಿ ಹೋರಾಡಬೇಕಾಗಿರುವ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಎಸ್. ಎಫ್. ಐ. ಯಂತಹ ಪ್ರಬಲ ಸಂಘಟನೆಯಲ್ಲಿ ಸಂಘಟಿತರಾಗಿ ದೇಶದ ಇತರ ಪ್ರಜಾಸತ್ತಾತ್ಮಕ ಸಂಘಟನೆಗಳಲ್ಲಿ ಒಂದುಗೂಡಿ ಐಕ್ಯ ಹೋರಾಟ ನಡೆಸಿದರೆ ಮಾತ್ರ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯ" ಎಂದವರು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ ಕಾಂ. ಮಾಧವ್ ಮಾತನಾಡುತ್ತಾ, "ದೇಶದಲ್ಲಿ ಆಳುವ ವರ್ಗಗಳು ಅನುಸರಿಸಿಕೊಂಡಿರುವ ಧೋರಣೆ, ದುಡಿಯುವ ಜನರ ಮೇಲೆ ನಿರಂತರ ಶೋಷಣೆ ಮತ್ತು ದಬ್ಬಾಳಿಕೆಗೆ ದಾರಿಮಾಡಿಕೊಟ್ಟಿದೆ. ಎಲ್ಲರೂ ನೆಮ್ಮದಿಯಿಂದ ಬಾಳಲು ಸಾಧ್ಯವಾಗುವಂತಹ, ಮಾನವನಿಂದ ಮಾನವನ ಶೋಷಣೆ ಇಲ್ಲದ ಹೊಸ ಸಮಾಜವನ್ನು ಕಟ್ಟಲು ಮುಂದಾಗುವಂತೆ ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಸಭೆಯ ಪ್ರಾರಂಭದಲ್ಲಿ ಘಟಕದ ಕಾರ್ಯದರ್ಶಿ ಕಾಂ. ಜಗನ್ನಾಥ ರೈ ಸ್ವಾಗತಿಸಿದರು. ಕರ್ನಾಟಕ ಪಾಲಿಟೆಕ್ನಿಕ್ ಮತ್ತು ಮಹಿಳಾ ಪಾಲಿಟೆಕ್ನಿಕ್ ಜಂಟೀ ಘಟಕಕ್ಕೆ ಪದಾಧಿಕಾರಿಗಳ, ಕಾರ್ಯಕಾರಿ ಸದಸ್ಯರುಗಳ ಸಮಿತಿ ರಚಿಸಲಾಯಿತು. ಹಾಗೂ ಬೇಡಿಕೆಗಳ ಪತ್ರವನ್ನು ಸರಕಾರದ ಮುಂದಿಟ್ಟು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿದೆ.

●

ಕಾರ್ಮಿಕ ವಿವಾದದಲ್ಲಿ ಪೋಲೀಸರ ಹಸ್ತಕ್ಷೇಪ

ಭಾರತದ ಅತಿ ದೊಡ್ಡ ಬಂಡವಾಳಶಾಹಿ ಶ್ರೀಮಾನ್ ಬಿರ್ಲಾರವರ ಹರಿಹರ ಪಾಲಿಫೈಬರ್ಸ್ ಕಾರ್ಖಾನೆ ಪೋಲೀಸ್ ಕಾಲೋನಿಯಾಗಿ ಪರಿವರ್ತಿಸಲಾಗಿದೆ. ಹಲವಾರು ವರ್ಷಗಳಿಂದ ಕಾರ್ಖಾನೆಯ ಸಂರಕ್ಷತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ಎಂಬತ್ತು ಜನ ಕಾರ್ಮಿಕರನ್ನು, ಆಡಳಿತವರ್ಗ ಯಾವುದೇ ನೋಟೀಸ್ ನೀಡದೆ ಕೆಲಸದಿಂದ ಹೊರಗೆ ಹಾಕಿದ್ದಾರೆ. ಹೊರಗೆ ಹಾಕುವ ಕಾರ್ಯಕ್ರಮಕ್ಕೆ ಬೆಂಬಲವಾಗಿ ಸುಮಾರು ಎರಡು ನೂರು ಪೋಲೀಸರು ಬೆಂಬಲವಾಗಿ ನಿಂತಿದ್ದಾರೆ. ಪೋಲೀಸರನ್ನು ಮುಂದಿಟ್ಟುಕೊಂಡು ಕಾರ್ಮಿಕರನ್ನು ಹೆದರಿಸಲು ಹೊರಟಿರುವ ಮಾಲೀಕರು, ಹದಿನೇಳು ಜನ ಕಾರ್ಮಿಕರನ್ನು ಬಂಧಿಸಿದ್ದಾರೆ. ಇದಕ್ಕೆ ಕಾರಣ ಸುರಕ್ಷತಾ ವಿಭಾಗದವರು ಸಂಘಕ್ಕೆ ಸೇರಿ ತಮ್ಮನ್ನು ಖಾಯಂ ಕೆಲಸಗಾರರೆಂದು ಪರಿಗಣಿಸಬೇಕೆಂಬ ಬೇಡಿಕೆಯನ್ನು ಇಟ್ಟದ್ದು, ಅಲ್ಲದೆ ಬೋನಸ್ ಸಲುವಾಗಿ ಹೋರಾಟಕ್ಕಿಳಿದ ಬಿರ್ಲಾ ಅತಿಥಿಗೃಹದ ಇಪ್ಪತ್ತುನಾಲ್ಕು ಕಾರ್ಮಿಕರನ್ನು ಸಹಾ ಹೊರಗೆ ಹಾಕಿ ಲಾಕೌಟ್ ಘೋಷಿಸಿರುತ್ತಾರೆ. ಅತಿಥಿಗೃಹದ ನೌಕರ ಶಿವರಾಂ ಎಂಬುವರನ್ನು ಪೋಲೀಸರು ಥಳಿಸಿದ್ದಾರೆ. ತಾರೀಕು 27-9-80ರಂದು ಬೆಳಿಗ್ಗೆ ನಡೆದ ಪೋಲೀಸರ ಹಸ್ತಕ್ಷೇಪದ ನಂತರ, ಸಂಜೆ ಮತ್ತೆ ಪೋಲೀಸರು ಕಾರ್ಮಿಕರ ಮನೆಗಳಿಗೆ ನುಗ್ಗಿ ಬೀಗಗಳನ್ನು ಒಡೆದು, ಸಾಮಾನುಗಳನ್ನು ಹೊರಗೆ ಹಾಕಿದ್ದಾರೆ. ಕಾರ್ಮಿಕರು ಮನೆಗಳನ್ನು ಕೂಡಲೇ ಖಾಲಿ ಮಾಡುವಂತೆ ನೋಟೀಸ್ ಸಹಾ ನೀಡದೆ ಆಡಳಿತವರ್ಗ ನಡೆಸಿರುವ ಅಪರಾಧ ಕೃತ್ಯಗಳನ್ನು ಹರಿಹರ ಪಾಲಿಫೈಬರ್ಸ್ ಕನ್‌ಸ್ಟ್ರಕ್ಷನ್ ಕೆಲಸಗಾರರ ಸಂಘ ಖಂಡಿಸಿದೆ. ಸುತ್ತಮುತ್ತ ಇರುವ ಸಮಸ್ತ ಕಾರ್ಮಿಕರು ಒಗ್ಗಟ್ಟಿನಿಂದ ಮಾಲೀಕರ ಪಾಳೆಗಾರಿಕೆ ಹಾಗೂ ಪೋಲೀಸರ ದೌರ್ಜನ್ಯವನ್ನು ಖಂಡಿಸಬೇಕೆಂದು ಹರಿಹರ ಫಾಲಿಫೈಬರ್ಸ್ ಕನ್‌ಸ್ಟ್ರಕ್ಷನ್ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ. ಇಕ್ಬಾಲ್ ಹುಸೇನ್ ಕೋರಿದ್ದಾರೆ.

●

ಕುಂದಾಪುರದಲ್ಲಿ ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆ-ಸಭೆ

ದಿನಾಂಕ 29-9-1980ರಂದು ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಬೀಡಿಕಾರ್ಮಿಕರ ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಸಭೆಯು ನಡೆಯಿತು. ಸಿ. ಐ. ಟಿ. ಯು. ವಿಗೆ ಸೇರಿದ ಕುಂದಾಪುರ ಕೆಲಸಗಾರರ ಸಂಘದ ನೇತೃತ್ವದಲ್ಲಿ ಕಳೆದ ಎರಡು ವಾರಗಳಿಂದ ಪ್ರಾವಿಡೆಂಟ್ ಫಂಡಿಗೆ ಕಡಿತವಾದ ಹಣದ ಸಂಪೂರ್ಣ ಲೆಕ್ಕ ಪಡೆಯಲು, ಬೀಡಿ ಮಜೂರರ ಮಧ್ಯ ಮನವಿಗೆ ಸಹಿ ಸಂಗ್ರಹ ಮತ್ತು ಬೀಡಿ ಕಂಟ್ರ್ಯಾಕ್ಟುದಾರರಿಗೆ ಮನವಿ ಕೊಟ್ಟು ಒತ್ತಾಯಿಸುವ ಚಳವಳಿ ನಡೆಯುತ್ತಾ ಇದ್ದು, ತಾರೀಕು 29ರಂದು ಪ್ರತಿಭಟನಾ ಮತಪ್ರದರ್ಶನವು ಮುಖ್ಯ ಬೀಡಿ ಬ್ರಾಂಚ್‌ಗಳ ಹಾಗೂ ತಹಸೀಲ್ದಾರರ ಕಛೇರಿಯ ಎದುರುಗಡೆ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ಬೀಡಿಕಾರ್ಮಿಕರು ಭಾಗವಹಿಸಿದ್ದು, ಹೆಚ್ಚಿನವರು ಮಹಿಳೆಯರು ಆಗಿದ್ದರು. ಬೀಡಿ ಕಾರ್ಮಿಕರ ಚಳವಳಿಗೆ ಬೆಂಬಲ ವ್ಯಕ್ತಪಡಿಸಿ, ಹಂಚಿನ ಕಾರ್ಖಾನೆಯ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಹಾಗೂ ಸಭೆಯಲ್ಲಿ ಭಾಗವಹಿಸಿದ್ದರು. ಸಾರ್ವಜನಿಕರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಂಜೆ ಘಂಟೆ 5ಕ್ಕೆ ಸರಿಯಾಗಿ ಕುಂದಾಪುರ ಶಾಸ್ತ್ರಿ ಪಾರ್ಕಿನ ಬಳಿ ನಡೆದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾಂ. ಅಬ್ರಹಾಂ ಕರ್ಕಡರವರು ವಹಿಸಿದ್ದರು. ಕಾಂ. ವಿ. ಮಹಾಬಲನವರು ಸ್ವಾಗತಿಸಿದರು. ಕರ್ನಾಟಕ ರಾಜ್ಯದ ಸಿ. ಐ. ಟಿ. ಯು. ವಿನ ಉಪಾಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್‌ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು, ಕಂಟ್ರ್ಯಾಕ್ಟುದಾರರು ಮತ್ತು ಮಾಲಕರು ಮಜೂರರನ್ನು ಯಾವ ರೀತಿ ವಂಚಿಸುತ್ತಾ ಇದ್ದಾರೆ ಅನ್ನುವುದರ ಬಗ್ಗೆ ವಿವರಿಸುತ್ತಾ, ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ●

ರೈತರ ಬೇಡಿಕೆಗಳಿಗಾಗಿ ಧರಣಿ ಸತ್ಯಾಗ್ರಹ

ದಿನಾಂಕ 29-9-80 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷಗಳ ವತಿಯಿಂದ ಭದ್ರಾವತಿಯ ತಾಲ್ಲೂಕು ಕಛೇರಿಯ ಎದುರು ಜಂಟಿಯಾಗಿ ರೈತರ ಬೇಡಿಕೆಗಳಿಗಾಗಿ ಧರಣಿ ಸತ್ಯಾಗ್ರಹದ ಕಾರ್ಯಕ್ರಮ ಕೈಗೊಂಡಿದ್ದವು.

ಭೂಹೀನರಿಗೆ ಭೂಮಿ ಸಿಗಬೇಕು, ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕು ಚೀಟಿ ದೊರೆಯಬೇಕು, ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ದೊರೆಯಬೇಕು ಎಂಬ ಇತ್ಯಾದಿ ಬೇಡಿಕೆಗಳನ್ನಿಟ್ಟು ಧರಣಿ ಸತ್ಯಾಗ್ರಹ ಕೈಗೊಳ್ಳಲಾಗಿತ್ತು. ಸತ್ಯಾಗ್ರಹಿಗಳ ನೇತೃತ್ವವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಚಂದ್ರಕುಟ್ಟಿ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷದ ಕಾಂ. ಸಿ. ಮಾಯಣ್ಣನವರು ವಹಿಸಿದ್ದರು.

ನಂತರ ನಡೆದ ಬಹಿರಂಗ ಸಭೆಯಲ್ಲಿ ತಾಲ್ಲೂಕಿನ ರೈತರು, ಕೃಷಿಕೂಲಿಕಾರರು ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಎರಡೂ ಪಕ್ಷಗಳ ಮುಖಂಡರುಗಳು ಮಾತನಾಡಿದರು. ●

ಜಂಟೀ ಹೋರಾಟಕ್ಕೆ ಬೀಡಿ ಫೆಡರೇಷನ್ ಕರೆ

ತಾ. 2-10-1980 ರಂದು ಕರ್ನಾಟಕ ಪ್ರದೇಶ ಬೀಡಿ ವರ್ಕರ್ಸ್ ಫೆಡರೇಷನ್ ಸಭೆಯು ಸಿ. ಐ. ಟಿ. ಯು. ಆಫೀಸಿನಲ್ಲಿ ಫೆಡರೇಷನ್ ಉಪಾಧ್ಯಕ್ಷ ಕಾಂ. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

ಈ ಸಭೆಗೆ ದಕ್ಷಿಣ ಕನ್ನಡ ಜಿಲ್ಲೆ, ಬೆಂಗಳೂರು, ಕೋಲಾರ, ತುಮಕೂರು, ಸಿರಾ, ಕುಣಿಗಲ್ ಮತ್ತು ಹರಿಹರದ ಸದಸ್ಯರುಗಳು ಹಾಜರಿದ್ದರು.

ಕಾರ್ಯದರ್ಶಿ ಕಾಂ. ಮಹಮದ್ ದಸ್ತಗೀರ್‌ರವರು ವರದಿಯನ್ನು ಸಲ್ಲಿಸಿದರು. ಮೈಸೂರಿನಲ್ಲಿ ನಡೆದ ವಿವಿಧ ವಿರೋಧ ಪಕ್ಷಗಳಿಗೆ ಸೇರಿದ ಬೀಡಿಕಾರ್ಮಿಕ ಸಂಘಟನೆಗಳ ಪ್ರತಿನಿಧಿ ಸಭೆಯಲ್ಲಿ ತೀರ್ಮಾನವಾದ ಸಾವಿರ ಬೀಡಿಯ ಮಜೂರಿ ಕನಿಷ್ಟ ಹನ್ನೆರಡು ರೂಪಾಯಿ, ಎಲೆ ಆ್ಯವರೇಜು ಮಾಲೀಕ ಕಾರ್ಮಿಕರ ಉಭಯ ವತಿಯಿಂದ ಎಲೆ ಕತ್ತರಿಸಿ ಬೀಡಿ ಸುತ್ತಿದ ನಂತರ ನ್ಯಾಯವಾದ ಆ್ಯವರೇಜನ್ನು ನಿಗದಿಮಾಡಬೇಕೆಂದು, ಕಾಂಟ್ರ್ಯಾಕ್ಟ್ ಪದ್ಧತಿಯನ್ನು ತಕ್ಷಣ ರದ್ದುಪಡಿಸುವುದು, ಈ ಮೊದಲಾದ ಬೇಡಿಕೆಗಳನ್ನು ಪರಿಶೀಲಿಸಿ ಈ ಬೇಡಿಕೆಗಳನ್ನು ಪಡೆಯಲು ಜಂಟೀ ಹೋರಾಟಕ್ಕೆ ಕಾರ್ಮಿಕರನ್ನು ಅಣಿಗೊಳಿಸಬೇಕೆಂದು ತೀರ್ಮಾನಿಸಲಾಯಿತು.

ಲೇಬಲ್ ಬೀಡಿಯ ಮೇಲೆ ಹಾಕಿರುವ ಕೇಂದ್ರ ಅಬ್ಕಾರಿ ತೆರಿಗೆಯನ್ನು ರದ್ದುಗೊಳಿಸಿ ಪುನಃ ಮೊದಲಿನ ರೀತಿ ಹೊಗೆಸೊಪ್ಪಿನ ಮೇಲೆ ಹಾಕಬೇಕೆಂದು ಮತ್ತು ವೆಲ್‌ಫೇರ್ ಸೆಸ್ ಹಾಲಿ ನಿಲ್ಲಿಸಿರುವ ವಸೂಲಿಯನ್ನು ಪುನಃ ಜಾರಿಗೆ ತರಬೇಕು; ಹಿಂದೆ ಇದ್ದ ಕೆ. ಜಿ. ತಂಬಾಕುವಿಗೆ ಇದ್ದ 25 ಪೈಸೆಯನ್ನು 50 ಪೈಸೆಗೆ ಹೆಚ್ಚಿಸಿ ವಸೂಲಿ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಹೋರಾಟ ಮಾಡಲು ತೀರ್ಮಾನಿಸಲಾಯಿತು.

ಅಖಿಲ ಭಾರತ ಬೀಡಿಕಾರ್ಮಿಕ ಸಮ್ಮೇಳನವು ಕರ್ನಾಟಕದಲ್ಲಿ ನಡೆಸಬೇಕೆಂದು ಅಖಿಲ ಭಾರತ ಬೀಡಿ ಮತ್ತು ಸಿಗಾರ್ ಕಾರ್ಮಿಕ ಕಮಿಟಿಯ ನಿರ್ಧಾರವನ್ನು ಸ್ವಾಗತಿಸಿ ಮುಂದಿನ ಸಭೆಯಲ್ಲಿ ಈ ಬಗೆಗೆ ಕರ್ನಾಟಕದ ಯಾವ ಜಿಲ್ಲೆಯಲ್ಲಿ ನಡೆಸಬೇಕೆಂದು ತೀರ್ಮಾನ ಮಾಡತಕ್ಕದೆಂದು ನಿರ್ಣಯಿಸಲಾಯಿತು.

●

ಶಿಡ್ಲಘಟ್ಟದ ಮಳ್ಳೂರಿನಲ್ಲಿ ಪ್ರತಿಭಟನಾ ಸಭೆ

ಶಿಡ್ಲಘಟ್ಟ ತಾಲ್ಲೂಕಿನ ಮಳ್ಳೂರಿನಲ್ಲಿ ಬೆಲೆಏರಿಕೆ, ಪೋಲೀಸ್ ದೌರ್ಜನ್ಯ, ಪತ್ರಿಕಾಲಯಗಳ ಮೇಲಿನ ಗೂಂಡಾಗಿರಿ, ರೈತರಿಗೆ ಅನ್ಯಾಯ ಇವುಗಳನ್ನು ಪ್ರತಿಭಟಿಸುವ ಸಭೆಯು 30-9-80 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಾಖೆಯ ಆಶ್ರಯದಲ್ಲಿ ನಡೆಯಿತು. ಬೃಹತ್ ಮೆರವಣಿಗೆಯ ನಂತರ ನಡೆದ ಸಭೆಯ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಜಿ. ಪಾಪಣ್ಣ ವಹಿಸಿದ್ದರು.

ಕೋಲಾರ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಲಕ್ಷ್ಮಣರೆಡ್ಡಿ, ರಾಜ್ಯದ ಎಸ್. ಎಫ್. ಐ. ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಮತ್ತು ಯುವಜನ ಸಂಘಟನೆಯ ಕಾರ್ಯದರ್ಶಿ ಪಿ. ಎಸ್. ವೆಂಕಟರಮಣರೆಡ್ಡಿ ಮಾತನಾಡಿ ಬೆಲೆಏರಿಕೆಯನ್ನು ತಡೆಗಟ್ಟಿ, ರೈತರ ಬೆಳೆಗೆ ನ್ಯಾಯಬೆಲೆ ಒದಗಿಸಿ, ಬಾಗೇಪಲ್ಲಿ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಯಲಿ ಎಂದು ಒತ್ತಾಯಿಸಿದರು. ಇತ್ತೀಚೆಗೆ ಪತ್ರಿಕಾಲಯಗಳ ಮೇಲೆ ನಡೆದ ಗೂಂಡಾಗಿರಿಯನ್ನು ಖಂಡಿಸಿ, ಆ ಕೃತ್ಯ ನಡೆಸಿದವರನ್ನು ಬಂಧಿಸಬೇಕೆಂದು ಭಾಷಣಕಾರರು ಒತ್ತಾಯಿಸಿದರು. ಕೋಲಾರ ಜಿಲ್ಲೆಯನ್ನು ಕ್ಷಾಮ ಪ್ರದೇಶವೆಂದು ಸಾರಲು ಸರ್ಕಾರಕ್ಕೆ ಮನವಿ ಮಾಡಲಾಯಿತು. ಎಲ್ಲ ಬೇಡಿಕೆಗಳ ಮನವಿಯನ್ನು ಮುಖ್ಯಮಂತ್ರಿ, ಗೃಹಖಾತೆ ಕಾರ್ಯದರ್ಶಿ, ಕೋಲಾರ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಯಿತು. ಸಭೆಯನ್ನು ಎನ್. ರಾಜಣ್ಣ ಸ್ವಾಗತಿಸಿದರು. ಎಂ. ಮುನಿಕೃಷ್ಣಪ್ಪ ವಂದಿಸಿದರು.

●

ವೇತನ ಏರಿಕೆಗೆ ಸಾಮಿಲ್ ಕಾರ್ಮಿಕರ ಮನವಿ


ಹಾಸನ ಜಿಲ್ಲೆಯ ಚಿಕ್ಕಮಗಳೂರಿನ ಸಾಮಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್ ಆಶ್ರಯದಲ್ಲಿ ಅಲ್ಲಿನ ಕಾರ್ಮಿಕರು ಬೆಲೆ ಏರಿಕೆಗೆ ಅನುಗುಣವಾಗಿ ವೇತನ ಏರಿಸಲು ಆಡಳಿತ ಮಂಡಳಿಗಳಿಗೆ ಮನವಿ ಸಲ್ಲಿಸಿದ್ದಾರೆ. ಕ್ಯೂರಿಂಗ್ ಸಂಸ್ಥೆಗಳಲ್ಲೂ ಕಾರ್ಮಿಕರಿಗೆ ಮನೆ ಸೌಲಭ್ಯ, ಬಾಡಿಗೆ ಭತ್ಯ ಇವುಗಳನ್ನು ಕೊಡುತ್ತಿಲ್ಲ.

ಈ ಎಲ್ಲ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವಂತೆ ಆಡಳಿತ ಮಂಡಳಿಗಳ ಮೇಲೆ ಒತ್ತಾಯ ತರಬೇಕಾಗಿದೆ.

●

ಚಿಕ್ಕಬಳ್ಳಾಪುರದಲ್ಲಿ ಅಧಿಕಾರಿಗಳ ದೌರ್ಜನ್ಯ

ಬಡವರ ಬಂಧುವೆಂದು ಹೇಳಿಕೊಳ್ಳುತ್ತಿರುವ ಸರಕಾರದ ಪ್ರತಿನಿಧಿಗಳಾದ ಅಧಿಕಾರಿಗಳು ಚಿಕ್ಕಬಳ್ಳಾಪುರದಲ್ಲಿ ದುರ್ಬಲವರ್ಗದವರು ವಾಸಿಸುತ್ತಿದ್ದ ಗುಡಿಸಲುಗಳನ್ನು ಕಿತ್ತು ಬೀಸಾಕಿದ್ದಾರೆ.



"ಗರೀಬರ ಮನೆ ಮುರಿಯುತ್ತಿರುವ ದೃಶ್ಯ"

ದಿನಾಂಕ 25-9-80ರಂದು ಚಿಕ್ಕಬಳ್ಳಾಪುರದ ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ್, ಪೋಲೀಸ ಅಧಿಕಾರಿಗಳ ನೇತೃತ್ವದಲ್ಲಿ ಈ ಅಮಾನುಷ ಕಾರ್ಯ ಜರುಗಿತು.

ಈ ಸುದ್ದಿ ತಿಳಿದ ತಕ್ಷಣ ಚಿಕ್ಕಬಳ್ಳಾಪುರದ ರೈತಕಾರ್ಮಿಕ ನಾಯಕರಾದ ಕಾಂ. ಲಕ್ಷ್ಮಯ್ಯ, ಕಾಂ. ರಾಮಯ್ಯ ಮತ್ತು ಕಾಂ. ಕಾಂತರಾಜ್ ಇವರು ಸ್ಥಳಕ್ಕೆ ಧಾವಿಸಿ ಪ್ರತಿಭಟಿಸಿದರು.

ಈ ಅನ್ಯಾಯವನ್ನು ವಿರೋಧಿಸಿ ಕೃಷಿಕೂಲಿಗಾರರು, ದುರ್ಬಲವರ್ಗದವರು ಮತ್ತು ವಸತಿಹೀನರು ಸೇರಿ ಸುಮಾರು 2000 ಜನ ಮೆರವಣಿಗೆ ನಡೆಸಿ, ಅಧಿಕಾರಿಗಳ ದೌರ್ಜನ್ಯದ ವಿರುದ್ಧ ಘೋಷಣೆ ಕೂಗುತ್ತಾ ಅಸಿಸ್ಟೆಂಟ್ ಕಮೀಷನರ ಕಛೇರಿಗೆ ಹೋಗಿ ಛೀಮಾರಿ ಹಾಕಿದರು. ಇನ್ನು ಗುಡಿಸಲುಗಳನ್ನು ಕೆಡುವುದಿಲ್ಲವೆಂಬ ಆಶ್ವಾಸನೆ ದೊರೆತ ಮೇಲೆ ಮೆರವಣಿಗೆ ಅಲ್ಲಿಂದ ತೆರಳಿದನಂತರ ಬಹಿರಂಗ ಸಭೆ ನಡೆಸಲಾಯಿತು. ಸಭೆಯನ್ನು ಉದ್ದೇಶಿಸಿ ಕಾಂ. ಲಕ್ಷ್ಮಯ್ಯ, ಕಾಂ. ಸತ್ಯನಾರಾಯಣ ಮಾತನಾಡಿ, ನೋಟೀಸ್ ಕೊಡದೇ ಮನೆಗಳನ್ನು ಉರುಳಿಸಿರುವುದನ್ನು ಉಗ್ರವಾಗಿ ಖಂಡಿಸಿ, ಇನ್ನು ಮುಂದೆ ಇಂತಹ ಕ್ರಮ ಜರುಗಿದ್ದೇ ಆದರೆ ತೀವ್ರ ಪ್ರತಿಭಟನೆ ಎದುರಿಸಬೇಕಾದೀತೆಂದು ಎಚ್ಚರಿಸಿದರು.

●

ಮಂಜೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಚುನಾವಣೆ

ಎಡ ಪ್ರಜಾಪ್ರಭುತ್ವ ಐಕ್ಯರಂಗದ ಪ್ರಚಂಡ ವಿಜಯ

ಮಂಜೇಶ್ವರ ಸರ್ವಿಸ್ ಕೋ-ಆಪರೇಟಿವ್ ಬೇಂಕಿನ ಚುನಾವಣೆಯು ಇದೇ ತಾರೀಕು 28-9-80ನೇ ಆದಿತ್ಯವಾರದಂದು ನಡೆಯಿತು.

ಈ ಚುನಾವಣೆಯ ಕಣದಲ್ಲಿ 2 ರಂಗಗಳು ಸ್ಪರ್ಧಿಸಿದ್ದವು. ಒಂದು ಎಡ ಪ್ರಜಾಪ್ರಭುತ್ವ ಐಕ್ಯರಂಗ ಮತ್ತು ಇನ್ನೊಂದು ಪ್ರತಿಪಕ್ಷ ಐಕ್ಯರಂಗ. ಪ್ರತಿಪಕ್ಷ ಐಕ್ಯರಂಗದಲ್ಲಿ ಇಂದಿರಾ ಕಾಂಗ್ರೆಸ್ ಭಾರತೀಯ ಜನತಾಪಕ್ಷ ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗಳು ಸೇರಿವೆ.

ಎಡ ಪ್ರಜಾಪ್ರಭುತ್ವ ಐಕ್ಯರಂಗದ ಉಮೇದ್ವಾರರು 400 ರಿಂದ 600 ಮತಗಳ ಅಂತರದಲ್ಲಿ ಪ್ರತಿಪಕ್ಷವನ್ನು ಸೋಲಿಸಿದರು. 1. ಕಾಂ. ಬಿ.ಯಂ. ರಾಮಯ್ಯ ಶೆಟ್ಟಿ, 2. ಕಾಂ. ಅಹಮದ್‌ಕುಂಞ, 3. ಕಾಂ. ಎಂ. ರಾಮಪ್ಪ, 4. ಕಾಂ. ಗಿರೀಶ್ ಭಟ್, 5. ಕಾಂ. ನಾರಾಯಣ ಹೊನ್ನೆ, 6. ಕಾಂ. ದಯಾನಂದ ಹಾಗೂ ಶ್ರೀ ಎಂ. ಎ. ಹಮೀದ್ ಎಡರಂಗದಲ್ಲಿ ವಿಜಯಿಗಳಾದ ಅಭ್ಯರ್ಥಿಗಳು.

ಶ್ರಮಜೀವಿಗಳ ಐಕ್ಯತೆಯನ್ನು ಕಾಪಾಡುತ್ತಲಿರುವ ಮಂಜೇಶ್ವರದ ಜನತೆ ಪ್ರತಿಗಾಮಿಗಳಿಗೆ ಎಂದೂ ತಲೆಬಾಗದೆ ಎದುರಿಸಲು ಪಣತೊಟ್ಟು ನಿಂತಿದೆ ಎಂಬುದಕ್ಕೆ ಈ ಚುನಾವಣೆ ಒಂದು ನಿದರ್ಶನವಾಗಿದೆ.

●

ಬೀಗಮುದ್ರೆ ಎತ್ತಲು ಒತ್ತಾಯ

ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಸಭೆಯು 3-10-80 ರಂದು ಸೇರಿ ಐ ಟಿ ಐ ನಲ್ಲಿ ಸಾರಿದ್ದ ಬೀಗಮುದ್ರೆಯನ್ನು ಖಂಡಿಸಲಾಯಿತು. ಹಾಗೆಯೇ ಐ ಟಿ ಸಿ ಕಾರಖಾನೆ ಸುತ್ತಮುತ್ತ ನಿಷೇಧಾಜ್ಞೆ ಹೇರಿದ್ದನ್ನು ಖಂಡಿಸಿತು.

●

ಮಳ್ಳೂರಿನಲ್ಲಿ ರೈತ ಸಭೆ

ದಿನಾಂಕ 30-9-80 ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಮಳ್ಳೂರಿನಲ್ಲಿ ಮಾಜಿ ಶಾಸಕರಾದ ಕಾಂ. ಜಿ. ಪಾಪಣ್ಣನವರ ಅಧ್ಯಕ್ಷತೆಯಲ್ಲಿ ರೈತಸಂಘದ ಬಹಿರಂಗ ಸಭೆ ನಡೆಯಿತು. ಬಾಗೇಪಲ್ಲಿಯಲ್ಲಿ ನಡೆದ ಪೋಲೀಸ್ ದೌರ್ಜನ್ಯವನ್ನು ಖಂಡಿಸಿ, ರೈತ ಮುಖಂಡರ ಮೇಲಿನ ಪೋಲೀಸ್ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಲು ಏರ್ಪಡಿಸಿದ್ದ ಈ ಸಭೆಯಲ್ಲಿ ಕೋಲಾರ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ ಮತ್ತು ಎಸ್. ಎಫ್. ಐ. ರಾಜ್ಯಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಮಾತನಾಡಿದರು. ಕಾಂ. ರಾಜಣ್ಣನವರು ಪ್ರಾರಂಭದಲ್ಲಿ ಸ್ವಾಗತಿಸಿದರು. ಕೊನೆಯಲ್ಲಿ ಕಾಂ. ಮುದ್ದುಕೃಷ್ಣಪ್ಪನವರು ವಂದಿಸಿದರು. ಶಿಡ್ಲಘಟ್ಟದ ಕಾರ್ಮಿಕ ಮುಖಂಡರಾದ ಕಾಂ. ಪಿ. ಎಸ್. ವೆಂಕಟರೆಡ್ಡಿಯವರು ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು.

●

ಸಿ.ಐ.ಟಿ.ಯು. ರಾಜ್ಯಮಂಡಳಿಯ ಸದಸ್ಯರ ಅವಗಾಹನೆಗೆ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಮಂಡಳಿಯ ಸಭೆಯು ಅಕ್ಟೋಬರ್ 23ರಿಂದ 24ರ ವರೆಗೂ 25 ಮತ್ತು 26ರಂದು ರಾಜ್ಯಮಂಡಳಿಯ ಸದಸ್ಯರಿಗೆ ಶಾಲೆಯೂ ಉಡುಪಿಯಲ್ಲಿ ನಡೆಯುತ್ತದೆ. ರಾಜ್ಯಮಂಡಳಿಯ ಎಲ್ಲಾ ಸದಸ್ಯರಿಗೆ ಸಭೆಯ ನೋಟೀಸನ್ನು ಕಳುಹಿಸಲಾಗಿದೆ. ಎಲ್ಲರೂ ತಪ್ಪದೆ ಸಭೆಗೆ ಬರಬೇಕೆಂದು ವಿನಂತಿ.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ ಟಿ.ಯು. ಕರ್ನಾಟಕ ರಾಜ್ಯಮಂಡಳಿ

ಯುವಜನ ಸಂಘಟಕರ ಗಮನಕ್ಕೆ

"ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ"ಯು ಇಂಗ್ಲೀಷಿನಲ್ಲಿ Karnataka Democratic Youth Organisation (ಕರ್ನಾಟಕ ಡೆಮೋಕ್ರಾಟಿಕ್ ಯೂತ್ ಆರ್ಗನೈಸೇಷನ್) ಎಂದು ಆಗುತ್ತೆ. ಕೆಲವು ಘಟಕದವರು ಡಿ. ವೈ. ಓ. ಎಂದು ಹಾಕುವ ಬದಲು ಡಿ. ವೈ. ಎಫ್. ಎಂದು ಹಾಕುತ್ತಲಿದ್ದಾರೆ. ಇದನ್ನು ಸರಿಪಡಿಸಬೇಕಾಗಿ ವಿನಂತಿ. ಈ ಮೊದಲು ಐಕ್ಯರಂಗದಲ್ಲಿ ಡಿ. ವೈ. ಎಫ್. ಮತ್ತು ಡಿ. ವೈ. ಓ. ಎಂದು ಬಂದಿರುವುದನ್ನು ಒಂದೇ (ಅಂದರೆ ಡಿ. ವೈ. ಓ) ಎಂದು ತಿಳಿದುಕೊಳ್ಳಬೇಕು.

ಜಿ. ವಿ. ಶ್ರೀರಾಮರೆಡ್ಡಿ
ಸಂಚಾಲಕ
ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ

ಆರು ಪಕ್ಷಗಳ ಯಶಸ್ವೀ ರಾಷ್ಟ್ರೀಯ ಸಮಾವೇಶ

(1ನೇ ಪುಟದಿಂದ)

ತೀಯ ಜನತಾ ಪಕ್ಷವನ್ನು ಆಮಂತ್ರಿಸಲಾಗಿಲ್ಲವೆಂಬ ಕಾರಣವೊಡ್ಡಿ ಜನತಾ ಪಕ್ಷ ಇದರಲ್ಲಿ ಭಾಗವಹಿಸಿಲ್ಲವಾದರೂ ಜನತಾ ಪಕ್ಷವನ್ನು ಈ ಒಕ್ಕೂಟದಿಂದ ಹೊರಗಿರಿಸುವ ಉದ್ದೇಶ ನಮಗಿಲ್ಲ' ಎಂದರು.

ಸಿ.ಪಿ.ಐ. ಪ್ರಧಾನ ಕಾರ್ಯದರ್ಶಿ ಸಿ ರಾಜೇಶ್ವರರಾವ್ ಅವರು ಸಕ್ಕರೆ ಉತ್ಪಾದಕರಿಗೆ ಸರಕಾರವು ಬೃಹತ್ ಪ್ರಮಾಣದ ರಿಯಾಯತಿಗಳನ್ನು ನೀಡಿರುವುದನ್ನು ಖಂಡಿಸಿದರು. ಏರುತ್ತಿರುವ ಜನತಾ ಹೋರಾಟಗಳ ಕುರಿತು ಪ್ರಸ್ತಾಪಿಸಿದ ಅವರು ಕರ್ನಾಟಕದ ರೈತರ ಚಳುವಳಿಯಲ್ಲಿ ಇಪ್ಪತ್ತೊಂದು ಜನರನ್ನು ಗುಂಡಿಕ್ಕಿ ಕೊಲ್ಲಲಾದುದು ಸರಕಾರವು ಜನರ ಹೋರಾಟಗಳನ್ನು ಹೇಗೆ ದಬ್ಬಾಳಿಕೆಯಿಂದ ಹೊಸಕಿ ಹಾಕುತ್ತಿದೆಯೆನ್ನುವುದಕ್ಕೆ ನಿದರ್ಶನವೆಂದೂ ಇದು ತುರ್ತು ಪರಿಸ್ಥಿತಿಗಿಂತ ಮೊದಲಿದ್ದ ಸ್ಥಿತಿಯನ್ನೇ ನೆನಪಿಗೆ ತರುತ್ತಿದೆಯೆಂದೂ ಹೇಳಿದರು. ಸಮಾವೇಶದಲ್ಲಿ ಭಾಗಿಯಾದ ಆರುಪಕ್ಷಗಳ ನಡುವೆ ಕೆಲವು ಭಿನ್ನಾಭಿಪ್ರಾಯಗಳಿರಬಹುದಾದರೂ ಕರಡು ನಿರ್ಣಯದಲ್ಲಿ ಪ್ರಸ್ತಾಪಿಸಲಾದ ಜನರ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಈ ಎಲ್ಲಾ ಪಕ್ಷಗಳಲ್ಲೂ ಸಂಪೂರ್ಣ ಒಮ್ಮತವಿದೆಯೆಂದು ಅವರು ಸಾರಿದರು.

"ಆರ್ಥಿಕ ರಂಗದಲ್ಲಿ, ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡಿಕೊಳ್ಳುವಲ್ಲಿ, ಕೋಮುವಾರು ಸೌಹಾರ್ದವನ್ನು ಉಳಿಸಿಕೊಳ್ಳುವಲ್ಲಿ ಮತ್ತು ಕಾನೂನು ಪರಿಸ್ಥಿತಿ ಹಾಗೂ ಆಡಳಿತರಂಗದಲ್ಲಿ ಸರಕಾರವು ತೀವ್ರವಾಗಿ ವಿಫಲಗೊಂಡಿರುವ ಈ ಹಿನ್ನೆಲೆಯಲ್ಲಿ ಸರ್ವಾಧಿಕಾರವು ಮತ್ತೆ ಮರುಕಳಿಸದಂತೆ ಮಾಡಲು ನಾವು ಭಿನ್ನಾಭಿಪ್ರಾಯಗಳನ್ನು ಮರೆತು ಹೋರಾಟದಲ್ಲಿರುವ ಜನರೊಡನೆ ಒಂದಾಗಬೇಕು" ಎಂದು ಆರೆಸ್ಪಿಯ ಶ್ರೀ ತಿದಿಬ್ ಚೌಧುರಿ ಹೇಳಿದರು. ಫಾರ್ವರ್ಡ್ ಬ್ಲಾಕ್‌ನ ಚಿತ್ತಬಸು ಅವರು ರಾಷ್ಟ್ರದಲ್ಲಿ ಅಸ್ಥಿರತೆಯುಂಟುಮಾಡಲು ಯತ್ನಿಸುತ್ತಿರುವ ವಿದೇಶಿ ಶಕ್ತಿಗಳ ಬಗ್ಗೆ ಎಚ್ಚರಿಸಿ ಈ ಸಮಾವೇಶವು ಬದಲೀ ವ್ಯವಸ್ಥೆಗಾಗಿ ಹಂಬಲಿಸುತ್ತಿರುವ ಜನತೆಯ ಆಶಯಗಳ ಅಭಿವ್ಯಕ್ತಿ ಎಂದರು. 1975 ಮತ್ತು ಇಂದಿಗೆ ಇರುವ ಒಂದು ಬಹುಮುಖ್ಯ ವ್ಯತ್ಯಾಸವೆಂದರೆ ಇಂದು ಪ. ಬಂಗಾಳ, ಕೇರಳ ಮತ್ತು ತ್ರಿಪುರಾದ ಎಡರಂಗ ಸರಕಾರಗಳೂ ಜನತೆಯೊಂದಿಗಿವೆ ಎಂದೂ ಅವರು ಹೇಳಿದರು.

ರಾಷ್ಟ್ರೀಯ ಬದಲಿ ವ್ಯವಸ್ಥೆ:

ಕಾಂಗ್ರೆಸ್ (ಐ) ಪಕ್ಷವು ವಿಘಟನೆ ಹೊಂದುತ್ತಿರುವ ಈ ಸಂದರ್ಭದಲ್ಲಿ ಆರು ಪಕ್ಷಗಳು ಒಂದಾಗಿ ಸಮಾವೇಶ ನಡೆಸುತ್ತಿರುವುದು ಒಂದು ಗಮನಾರ್ಹ ಬೆಳವಣಿಗೆಯೆಂದೂ ಇದು ರಾಷ್ಟ್ರೀಯ ಬದಲಿ ವ್ಯವಸ್ಥೆಯೊಂದರ ನಿರ್ಮಾಣದಲ್ಲಿ ಮೊದಲ ಹಂತವೆಂದೂ ಪತ್ರಿಕೆಗಳು ಇದನ್ನು ವಿಶೇಷವಾಗಿ ಗಮನಿಸಬೇಕೆಂದೂ ಸಿ. ಪಿ. ಐ.(ಎಂ)ನ ಪ್ರಧಾನ ಕಾರ್ಯದರ್ಶಿ ಕಾಂ. ಇ. ಎಂ. ಎಸ್. ನಂಬೂದಿರಿಪಾಡ್ ಕರೆ ನೀಡಿದರು. "ನಮ್ಮೊಳಗಿನ ಭಿನ್ನಾಭಿಪ್ರಾಯ ಮುಖ್ಯವಲ್ಲ; ನಾವು ಚುನಾವಣೆಗಳಲ್ಲಿ ಸಿಗುವ ಅಲ್ಪಸ್ವಲ್ಪ ಲಾಭಕ್ಕಾಗಿಯೂ ಒಂದಾಗುತ್ತಿಲ್ಲ. ಜನರ ಬೇಡಿಕೆಗಳಿಗಾಗಿ ಹೋರಾಡಲು ಒಂದಾಗಿದ್ದೇವೆ. ಏಕೆಂದರೆ ಸಮಾನ ಬೇಡಿಕೆಗಳಿಗಾಗಿ ಜನರನ್ನು ಒಂದುಗೂಡಿಸುವುದು ಈಗಿನ ತುರ್ತು ಅವಶ್ಯಕತೆ. ಹೋರಾಟಕ್ಕೆ, ಕ್ರಿಯೆಗೆ ಕರೆ ನೀಡುವುದೇ ನಮ್ಮ ಕರಡು ನಿರ್ಣಯದ ಒಟ್ಟು ಅಭಿಪ್ರಾಯ. ಇದರ ಸುಧಾರಣೆಗಾಗಿ ಸಮಾವೇಶದೊಳಗೂ ಹೊರಗಿನಿಂದಲೂ ಸಲಹೆಗಳು ಬರಬೇಕಾಗಿವೆ. ಅವಕ್ಕೆ ಸ್ವಾಗತ" ಎಂದು ಕಾಂ. ಇ. ಎಂ. ಎಸ್. ಹೇಳಿದರು. "ಇಂದು ಹಂದಿಗಾಗಿ, ದನಗಳಿಗಾಗಿ ಮನುಷ್ಯರನ್ನು ಕೊಲ್ಲಲಾಗುತ್ತಿರುವುದು ಶೋಚನೀಯ. ಕೋಮು ಗಲಭೆಗಳು ಜನರ ಒಗ್ಗಟ್ಟಿಗೆ ತೀವ್ರ ಆತಂಕವುಂಟುಮಾಡುತ್ತಿವೆ ಹಾಗಾಗಿ ಅಂತಹ ಗಲಭೆಗಳ ಹಿಂದೆ ಯಾರೇ ಇದ್ದರೂ ಅಂತಹ ಶಕ್ತಿಗಳನ್ನು ಖಂಡತುಂಡವಾಗಿ ವಿರೋಧಿಸಬೇಕು' ಎಂದೂ ಕಾಂ. ನಂಬೂದಿರಿಪಾಡ್ ಕರೆಯಿತ್ತರು. ನಾಗರಿಕ ಹಕ್ಕುಗಳ ಮೇಲಾಗುತ್ತಿರುವ ಅತಿಕ್ರಮಣದ ಕುರಿತು ಹೇಳಿದ ಅವರು ರಾಷ್ಟ್ರೀಯ ಸುರಕ್ಷಾ ಅಧ್ಯಾದೇಶ ಮುಂತಾದವುಗಳನ್ನು ಜ್ಯಾರಿಗೊಳಿಸುತ್ತಿರುವುದರ ಜೊತೆಗೆನೇ ಕೇಂದ್ರಸರಕಾರವು ರಾಜ್ಯಗಳ ಎಲ್ಲಾ ಅಧಿಕಾರಗಳನ್ನು ಕಸಿದುಕೊಂಡು ದೇಶದ ಫೆಡರಲ್ ಸ್ವರೂಪವನ್ನು ನಾಶಗೊಳಿಸುವ ಮೂಲಕ ಪ್ರಜಾಸತ್ತೆಯನ್ನು ನಿರ್ನಾಮ ಮಾಡುವುದರತ್ತ ಭರದಿಂದ ಸಾಗುತ್ತಿದೆ ಎಂದೂ ಎಚ್ಚರಿಸಿದರು.

ಆಳುವ ಪಕ್ಷವು ವಿರೋಧ ಪಕ್ಷಗಳ ಸ್ವರವನ್ನು ಅಡಗಿಸಲು ಪ್ರಯತ್ನಿಸುವ ಮೂಲಕ ಸಂವಿಧಾನದಲ್ಲಿ ಅಂಗೀಕರಿಸಲಾದ ಮೌಲ್ಯಗಳನ್ನು ಉಲ್ಲಂಘಿಸುತ್ತಿದೆಯೆಂದು ಕಾಂಗ್ರೆಸ್ (ಯು)ನ ಶ್ರೀಮತಿ ತಾರಕೇಶ್ವರಿಸಿನ್ಹಾ ಹೇಳಿದರು. ಕಾಂಗ್ರೆಸ್ (ಯು)ನ ಬಹುಮಂದಿ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದುದೂ ಸ್ವತಃ ಅದರ ಅಧ್ಯಕ್ಷರಾದ ಶ್ರೀ ದೇವರಾಜ ಅರಸ್ ಅವರು ಸಮಾವೇಶಕ್ಕೆ ಶುಭಕೋರಿ ಸಂದೇಶವನ್ನು ಕಳುಹಿಸಿದುದೂ ಕಾಂಗ್ರೆಸ್ (ಯು) ಸಮಾವೇಶದಲ್ಲಿ ಭಾಗವಹಿಸಲಾರದೆಂದು ಪತ್ರಿಕೆಗಳ ಒಂದು ವಿಭಾಗ ನಡೆಸಿದ್ದ ಅಪಪ್ರಚಾರವನ್ನು ಸುಳ್ಳಾಗಿಸಿದೆ. ●

ಕೋಲಾರದಲ್ಲಿ ಎಸ್.ಎಫ್.ಐ. ಉದ್ಘಾಟನೆ

ಅಕ್ಟೋಬರ್ ಒಂದರಂದು ಕೋಲಾರದ ಸರ್ಕಾರಿ ಕಾಲೇಜಿನ ಸರ್, ಎಂ. ವಿಶ್ವೇಶ್ವರಯ್ಯ ಆಡಿಟೋರಿಯಂನಲ್ಲಿ ಎಸ್. ಎಫ್. ಐ. ಶಾಖೆಯ ಉದ್ಘಾಟನಾ ಸಮಾರಂಭ ಯಶಸ್ವಿಯಾಗಿ ನಡೆಯಿತು. ಪ್ರಾರಂಭದಲ್ಲಿ ದಲಿತ ಸಂಘರ್ಷ ಸಮಿತಿಯ ಕಾಂ. ನಾರಾಯಣ ಸ್ವಾಮಿ ಕ್ರಾಂತಿಗೀತೆಗಳನ್ನು ಹಾಡಿದರು.

ನಂತರ ಉದ್ಘಾಟನೆ ಮಾಡಿದ ಇದೇ ಕಾಲೇಜಿನ ಕನ್ನಡ ಉಪನ್ಯಾಸಕ ಶ್ರೀ ಚಂದ್ರಮೋಹನ್ ಮಾತನಾಡುತ್ತಾ ಜಾತೀವಾದಿ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ದೇಶದಲ್ಲಿನ ವಿದ್ಯಾರ್ಥಿ-ಯುವಜನತೆಯನ್ನು ತಪ್ಪುದಾರಿಗೆಳೆಯುತ್ತಿರುವ ಈ ಸಂದರ್ಭದಲ್ಲಿ ಎಸ್. ಎಫ್. ಐ ನಂತಹ ಕ್ರಾಂತಿಕಾರಿ ಸಂಘಟನೆಯನ್ನು ಬಲಿಷ್ಟವಾಗಿ ಬೆಳೆಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ವಿದ್ಯಾರ್ಥಿ ಹಾಗೂ ಅಧ್ಯಾಪಕರುಗಳಿಂದ ಕಿಕ್ಕಿರಿದು ನೆರೆದಿದ್ದ ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿದ್ದ ಎಸ್. ಎಫ್. ಐ. ರಾಜ್ಯ ಶಾಖೆ ಪ್ರಧಾನ ಕಾರ್ಯದರ್ಶಿ ಎಸ್. ಆರ್, ಆರಾಧ್ಯನವರು ಮಾತನಾಡುತ್ತಾ ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಕಡೆ ತೀವ್ರ ಗಮನ ನೀಡುವುದರ ಜೊತೆಗೆ ಸಮಾಜದಲ್ಲಿನ ಅನ್ಯಾಯ, ಶೋಷಣೆಯ ವಿರುದ್ಧ ಹೋರಾಡುವ 'ಅಭ್ಯಾಸ ಮತ್ತು ಹೋರಾಟ'ದ ನೀತಿಯನ್ನು ಅನುಸರಿಸಬೇಕೆಂದರು.

ಕೋಲಾರ ಜಿಲ್ಲೆಯ ರೈತ ಮುಖಂಡರಾದ ಕಾಂ ಆರ್. ವೆಂಕಟರಾಮಯ್ಯ ಮತ್ತು ವೆಂಕಟಗಿರಿಯಪ್ಪನವರು ಸಹ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ಹೇಳಿದರು.

ಚಿಂತಾಮಣಿ ಎಸ್. ಎಫ್. ಐ. ಶಾಖೆಯ ಕಾರ್ಯದರ್ಶಿ ಕಾಂ. ಹರೀಂದ್ರನವರು ಶುಭಾಶಯ ಕೋರಿದರು. ಜಿಲ್ಲೆಯಲ್ಲಿ ಎಸ್. ಎಫ್ ಐ. ಸಂಘಟನೆಯನ್ನು ಬಲಪಡಿಸಲು ಸದ್ಯದಲ್ಲೇ ಕೋಲಾರದಲ್ಲಿ ಜಿಲ್ಲಾ ಸಮ್ಮೇಳನವನ್ನು ನಡೆಸಬೇಕೆಂಬ ಸಲಹೆ ನೀಡಿದ ಅವರು ಚಿಂತಾಮಣಿಯಲ್ಲಿ ಮೂರನೇ ರಾಜ್ಯ ಸಮ್ಮೇಳನವನ್ನು ನಡೆಸಲು ಸಿದ್ಧತೆ ನಡೆಸುತ್ತಿರುವುದಾಗಿ ಹೇಳಿದರು.

ಕೋಲಾರದ ದಲಿತ ಸಂಘರ್ಷ ಸಮಿತಿಯ ಪರವಾಗಿ ಬೆಂಬಲ ಸೂಚಿಸಿ ಶುಭಾಶಯ ಕೋರಲಾಯಿತು. ಸ್ಥಳೀಯ ವಿದ್ಯಾರ್ಥಿ ಮುಖಂಡರು ಸಹ ಈ ಸಭೆಯಲ್ಲಿ ಮಾತನಾಡಿದರು. ●

ಸಂಪಾದಕೀಯ

(1ನೇ ಪುಟದಿಂದ)

ಸರಕಾರದ ದಿವಾಳಿಖೋರ ನೀತಿಯನ್ನು ವಿರೋಧಿಸಿ, ದೊಡ್ಡ ಬಂಡವಾಳಗಾರರು ರೈತರನ್ನು ಶೋಷಿಸುವುದನ್ನು ಪ್ರತಿಭಟಿಸುವ ರೈತರ ಚಳುವಳಿಗೆ ಸಂಪೂರ್ಣ ಬೆಂಬಲವನ್ನಿತ್ತು, ಸಕ್ರಿಯವಾಗಿ ಭಾಗವಹಿಸುವುದರೊಂದಿಗೆ ಹಳ್ಳಿಯ ಅತ್ಯಂತ ಬಡಜನರ ಸಂಘಟನೆ ಮತ್ತು ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವತ್ತ ಗಮನಹರಿಸಬೇಕು. ಹಳ್ಳಿಯ ಅತ್ಯಂತ ಬಡಜನರನ್ನೂ ರೈತರನ್ನೂ ಒಂದುಸೇರಿಸಿ ಹೋರಾಟ ನಡೆಸಿದ್ದರೆ, ಈ ಎರಡು ವಿಭಾಗವನ್ನು ವಿಭಜಿಸಿ ಆಳುವ ನೀತಿಯನ್ನೂ ಸರಕಾರ ಮಾಡುವುದು ಸಾಧ್ಯವಿದೆ. ●

ಹಾನಗಲ್ ತಾಲೂಕದಲ್ಲಿ ರೈತ ಸಮಾವೇಶ

ದಿನಾಂಕ 28-°-80ರಂದು ಹಾನಗಲ್‌ನಲ್ಲಿ ರೈತಕೂಲಿಕಾರರ ಪ್ರತಿನಿಧಿಗಳ ಸಭೆ ನಡೆಯಿತು. ಜಿಲ್ಲೆಯ 8 ತಾಲ್ಲೂಕುಗಳಿಂದ 49 ಪ್ರತಿನಿಧಿಗಳು ಹಾಗೂ ಹಾನಗಲ್ ತಾಲ್ಲೂಕಿನ ಸುಮಾರು ಸಾವಿರ ಜನ ಸಭೆಯಲ್ಲಿ ಭಾಗವಹಿಸಿದ್ದರು.

ಕೆಂಪು ನಿಶಾನಿಗಳನ್ನು ಹಿಡಿದುಕೊಂಡ ಸುಮಾರು ಸಾವಿರ ಜನರ ಮೆರವಣಿಗೆ ನಗರದಲ್ಲೆಲ್ಲಾ ಸುತ್ತಾಡಿ ಸಿನೇಮಾ ಥಿಯೇಟರಿನಲ್ಲಿ ಸಮಾವೇಶಗೊಂಡಿತು.

ರೈತಪ್ರತಿನಿಧಿಗಳ ಸಭೆಯ ಅಧ್ಯಕ್ಷತೆಯನ್ನು ನರಗುಂದ-ನವಲಗುಂದ ರೈತ ಸಮನ್ವಯ ಸಮಿತಿಯ ಸಂಚಾಲಕ ಕಾಂ. ವಿ. ಎನ್. ಹಳಕಟ್ಟಿಯವರು ವಹಿಸಿದ್ದರು ರಾಜ್ಯದರೈತ ಆಂದೋಲನದಲ್ಲಿ ಪೋಲೀಸ್ ಗುಂಡಿಗೆ ಬಲಿಯಾಗಿ ಹುತಾತ್ಮರಾದ ರೈತಬಾಂಧವರಿಗೆ ಶ್ರದ್ಧಾಂಜಲಿ ಅರ್ಪಿಸಲು ಸಭೆ ಎರಡು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿತು. ಕಾಂ. ಎ. ಜೆ. ಮುಧೋಳರು ಸಭೆಯನ್ನು ಉದ್ಘಾಟಿಸಿದರು.

ಹಾನಗಲ್ ತಾಲ್ಲೂಕು ರೈತಸಂಘದ ಅಧ್ಯಕ್ಷ ಶ್ರೀ ಫಕೀರಪ್ಪ ಹೋತನಹಳ್ಳಿಯವರು ಸಭೆಗೆ ವರದಿಯನ್ನೊಪ್ಪಿಸಿದರು. ವರದಿಯನ್ನು ಸಮರ್ಥಿಸಿ ಕಾಂ. ಎಂ. ಎಸ್. ಧಾರೇಶ್ವರ, ಲೋಕದಳದ ಜಿಲ್ಲಾ ಕಾರ್ಯದರ್ಶಿ ಪಿ ಸಿ. ಶೆಟ್ಟರ, ಕಾಂ. ಶ್ರೀನಿವಾಸ ಗುಡಿ ಮುಂತಾದವರು ಮಾತನಾಡಿದರು. ನಂತರ ಜಿಲ್ಲೆಯ ರೈತರ 21 ಬೇಡಿಕೆಗಳನ್ನು ಪ್ರಕಟಿಸಲಾಯಿತು.

ಅಲ್ಲದೇ ರಾಜ್ಯದ ಪ್ರಮುಖ ದಿನಪತ್ರಿಕೆಗಳ ಮೇಲೆ ಕಾಂಗ್ರೆಸಿಗರು ನಡೆಸಿದ ಹಲ್ಲೆಯನ್ನು ಖಂಡಿಸುವ, ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಯನ್ನು ಖಂಡಿಸುವ ಠರಾವುಗಳನ್ನು ಮಂಡಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಕಾಂ. ಹಳಕಟ್ಟಿಯವರು ಮಾತನಾಡುತ್ತಾ, "ರೈತರು ತಮ್ಮ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಂಘಟಿತ ಹೋರಾಟವೊಂದೇ ದಾರಿ" ಎಂದು ಸಂಘಟಿತರಾಗಲು ಕರೆಕೊಟ್ಟರು. ○

ವ್ಯವಸಾಯ ಸಹಕಾರಿ ಸಂಘದ ಸಭೆ

ಮಂಗಳೂರಿನ ಕಾವೂರಿನಲ್ಲಿರುವ ವ್ಯವಸಾಯ ಸೇವಾ ಸಹಕಾರಿ ಸಂಘದ ನಾಲ್ಕನೇ ವಾರ್ಷಿಕ ಸಭೆಯು 21-9-80 ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕೆ.ಆರ್ ಶ್ರೀಯಾನ್ ವಹಿಸಿದ್ದರು. 1980-81ನೇ ಸಾಲಿನ ಆಡಳಿತ ಮಂಡಳಿಯನ್ನು ಸಭೆಯಲ್ಲಿ ಚುನಾಯಿಸಲಾಯಿತು. ಇದರಲ್ಲಿ ಚಿಕ್ಕ ಮತ್ತು ಸಣ್ಣ ರೈತರ ವಿಭಾಗಕ್ಕೆ ಕೆ. ಹೊನ್ನಯ್ಯ, ಕೆ. ಬಿರಿಯಪ್ಪ ಶೆಟ್ಟಿಗಾರ, ಭಾಸ್ಕರಕೊಂಡೆ, ಎಸ್. ಸಾಧು, ಹರಿಜನಗಿರಿಜನ ವಿಭಾಗಕ್ಕೆ ತುಕ್ರ. ಇತರ ವಿಭಾಗಕ್ಕೆ ಕೆ.ಆರ್. ಶ್ರೀಯಾನ್, ಕೆ. ಜಾರಪ್ಪ, ಕೆ.ಆರ್. ಪೈ, ಎಂ.ಎಸ್. ಮೇಲಾಂಟ ಅವರು ಆಯ್ಕೆಯಾದರು. ●

....ಯುವಜನತೆಯ ಪ್ರತಿಭಟನೆ

(1ನೇ ಪುಟದಿಂದ)

ವಿನಿಮಯ ಕಛೇರಿ ಎದುರು ಸತ್ಯಾಗ್ರಹ ನಡೆಸಿ, ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿಗಳಿಗೆ ಮನವಿ ಅರ್ಪಿಸಿದರು. ಎಸ್. ಎಫ್. ಐ. ಕಾರ್ಯಕರ್ತರೂ ಇದರಲ್ಲಿ ಭಾಗವಹಿಸಿದ್ದರು. ಕೊನೆಗೆ ನಡೆದ ಬಹಿರಂಗ ಸಭೆಯಲ್ಲಿ ಕಾಂ. ಬಿ. ಉಮಾನಾಥ ಮಾತನಾಡಿದರು.

ಕುದುರೆಮುಖದ ಕಳಸ ಉದ್ಯೋಗ ವಿನಿಮಯ ಕಛೇರಿ ಎದುರು ಧರಣಿ ನಡೆಸಿ, ಮನವಿ ಅರ್ಪಿಸಿದ ವಾರ್ತೆ ಬಂದಿದೆ. ಸಕಲೇಶಪುರ ಮತ್ತು ಶೃಂಗೇರಿಗಳಲ್ಲೂ ಕಾರ್ಯಕ್ರಮ ನಡೆದ ಸುದ್ದಿ ದೊರೆತಿದೆ. ಉತ್ತರ ಕರ್ನಾಟಕದ ಕೆಲವೆಡೆಗಳಲ್ಲೂ ಕಾರ್ಯಕ್ರಮ ನಡೆದಿದೆ. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT